# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬**

**'ವಿಶ್ವವಿದ್ಯಾನಿಲಯದ 25ನೇ ವರ್ಷದ ಬೆಳ್ಳಿ ಹಬ್ಬದ ವರ್ಷಾಚರಣೆ' ಜೂನ್ – 2021 ರಿಂದ ಜೂನ್ – 2022 ರವರೆಗೆ**

**ದಿನಾಂಕ: 20–05–2022 ರಂದು ಅಪರಾಹ್ನ 03:00 ಗಂಟೆಗೆ** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ಕಚೇರಿ ಸಭಾಂಗಣದಲ್ಲಿ, ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ **59ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ** ನಡಾವಳಿ.

| **ಉಪಸ್ಥಿತರು** | |
|---|---|
| **ಡಾ. ವಿದ್ಯಾಶಂಕರ್ .ಎಸ್.**<br>ಮಾನ್ಯ ಕುಲಪತಿಗಳು ಹಾಗು ಅಧ್ಯಕ್ಷರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಪ್ರೊ. ಆರ್.ರಾಜಣ್ಣ**<br>ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿಗಳು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು ಹಾಗು |
| **ಡಾ. ಕಾಂಬ್ಳೆ ಅಶೋಕ್**<br>ಡೀನ್ (ಶೈಕ್ಷಣಿಕ) ಹಾಗು<br>ಸದಸ್ಯರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಡಾ. ಎ. ಖಾದರ್ ಪಾಷಾ– ಅನುಪಸ್ಥಿತರು**<br>ಹಣಕಾಸು ಅಧಿಕಾರಿಗಳು ಹಾಗು ಸದಸ್ಯರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |
| **ಡಾ. ಕೆ.ಬಿ. ಪ್ರವೀಣ**<br>**ಕುಲಸಚಿವ (ಪರೀಕ್ಷಾಂಗ)**<br>ಸದಸ್ಯರು ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಡಾ. ಷಣ್ಮುಖ**<br>ಡೀನ್ (ಅಧ್ಯಯನ ಕೇಂದ್ರಗಳು),<br>ಸದಸ್ಯರು ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |
| **ಪ್ರೊ. ಲಕ್ಷ್ಮಿ .ಎನ್**<br>ಅಧ್ಯಕ್ಷರು, ಶಿಕ್ಷಣಶಾಸ್ತ್ರ ಅಧ್ಯಯನ ಹಾಗು ಸಂಶೋಧನಾ ವಿಭಾಗ<br>ಸದಸ್ಯರು ಶೈಕ್ಷಣಿಕ ಮಂಡಳಿ, ಕರಾಮುವಿ, ಮೈಸೂರು. | |
| **ವಿಶೇಷ ಆಹ್ವಾನಿತರು** | |
| **ಡಾ. ನಿರಂಜನ್ ರಾಜ್**<br>CIQA **ನಿರ್ದೇಶಕರು**<br>ಕರಾಮುವಿ, ಮೈಸೂರು. | **ಡಾ. ಹೆಚ್. ರಾಜೇಶ್ವರಿ**<br>**ವಿಶೇಷಾಧಿಕಾರಿ – ಡೀನ್ (ಶೈಕ್ಷಣಿಕ)**<br>ಕರಾಮುವಿ, ಮೈಸೂರು. |

ಸಭೆಗೆ ಹಾಜರಾಗಿದ್ದ ಅಧ್ಯಕ್ಷರು ಹಾಗು ಸದಸ್ಯರುಗಳನ್ನು ಮಾನ್ಯ ಡೀನ್ (ಶೈಕ್ಷಣಿಕ) ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡುತ್ತಾ, 59ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ಕಾರ್ಯಸೂಚಿಯನ್ನು ಸಭೆಯಲ್ಲಿ ಮಂಡಿಸಲು ಡೀನ್ (ಶೈಕ್ಷಣಿಕ) ವಿಭಾಗದ ವಿಶೇಷಾಧಿಕಾರಿ ಅವರಿಗೆ ಸೂಚಿಸಿದರು.

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.01

**ವಿಷಯ :** 2021–22ನೇ ಸಾಲಿನ January Cycle ಆವೃತ್ತಿಯ ವಿವರಣಾ ಪುಸ್ತಕಗಳನ್ನು ಅನುಮೋದಿಸುವ ಬಗ್ಗೆ.

****

2021–22ನೇ ಸಾಲಿನ January Cycle ಆವೃತ್ತಿಯ ಪ್ರವೇಶಾತಿ ಪ್ರಾರಂಭಿಸುವ ಸಲುವಾಗಿ ಈ ಕೆಳಕಂಡ ಕಾರ್ಯಕ್ರಮಗಳ ವಿವರಣಾ ಪುಸ್ತಕಗಳನ್ನು ಸಿದ್ಧಪಡಿಸಲು ಕಛೇರಿ ಸಂಖ್ಯೆ : ಕರಾಮುವಿ/ಡೀನ್(ಶೈ)–07/2021–22 ದಿನಾಂಕ: 01–01–2022 ರ ಪ್ರಕಾರ ಅಧ್ಯಾಪಕರ ಸಮಿತಿಯನ್ನು ರಚಿಸಿ ಕಚೇರಿ ಆದೇಶ ಹೊರಡಿಸಲಾಗಿತ್ತು. ಪ್ರಸ್ತುತ, ಸದರಿ ಸಮಿತಿಯು ವಿ.ವಿ.ಯ ಆಯಾಯ ಕಾರ್ಯಕ್ರಮಗಳ ಅಧ್ಯಾದೇಶಗಳು ಮತ್ತು UGC ನಿಯಾಮವಳಿಯ ಪ್ರಕಾರ ವಿವರಣಾ ಪುಸ್ತಕಗಳನ್ನು ಸಿದ್ಧಪಡಿಸಿ ಸಲ್ಲಿಸಲಾಗಿ, ಇವುಗಳನ್ನು ಈಗಾಗಲೇ ಪ್ರವೇಶಾತಿ ಪ್ರಕ್ರಿಯೆಗಾಗಿ ವಿಶ್ವವಿದ್ಯಾನಿಲಯದ ವೆಬ್ ಸೈಟ್ (www.ksoumysuru.ac.in) ನಲ್ಲಿ ಪ್ರಕಟಿಸಲಾಗಿದೆ ಮತ್ತು ಪ್ರವೇಶಾತಿ ಪ್ರಕ್ರಿಯೆ ಮುಗಿದಿರುತ್ತದೆ.

**ಪ್ರಕಟಿಸಲಾಗಿರುವ ವಿವರಣಾ ಪುಸ್ತಕಗಳ ವಿವರ :**

1. **B.A, B.Com, B.Ed, B.Lib.I.Sc, B.B.A (Marketing Management), B.Sc (General), B.Sc (Home Science), B.Sc (Information Technology) and B.C.A** Programmes
2. **M.A CBCS:** (Kannada, English, Hindi, Telugu, Education, History, Economics, Political Science, Sociology, Journalism and Mass Communication).
3. **M.A Non CBCS:** (Sanskrit, Urdu, Public Administration, Ancient History and Archeology,).
4. **M.Com** Programme
5. **M.Sc.:** (Bio-Chemistry, Bio-Technology, Chemistry, Clinical Nutrition and Dietetics, Environmental Science, Computer Science, Geography, Information Technology, Mathematics, Micro Biology, Physics, Psychology, Botany, Zoology, Food and Nutrition Science)
6. **M.Lib.I.Sc** Programme
7. **MBA** Programme
8. **Diploma Programmes :** [Diploma in Kannada (DIK), Diploma in Journalism (DIJ), Diploma in Nutrition and Health Education (DNHE), Diploma in Information Technology (DIT), Diploma in Computer Application (DCA)]
9. **Post – Graduation Certificate Programmes:** [Post Graduate Certificate in English (PGCE), Post Graduate Certificate in Communicative English (PGCCE), Post Graduate Certificate in Human Resource Management (PGCHRM), Post Graduate Certificate in Financial Management (PGCFM), Post Graduate Certificate in Business Administration (PGCBA), Post Graduate Certificate in Marketing Management (PGCMM), Post Graduate Certificate in Nutrition and Deities (PGCND), Post Graduate Certificate in Journalism and Mass Communication (PGCJMC), Post Graduate Certificate in Kuvempu Sahithya (PGCKS), Post Graduate Certificate in Business Law (PGCBL), Post Graduate Certificate in Information Technology (PGCIT), Post Graduate Certificate in Computer Application (PGCCA), Post Graduate Certificate in Ambedkar Studies (PGCAS)]
10. **Under Graduation Certificate Programmes:** [Certificate in Panchayath Raj (UGCPR), Certificate in Nutrition and Food (UGCNF), Certificate in Information Communication Technology (UGCICT)]

ಸದರಿ ವಿವರಣಾ ಪುಸ್ತಕಗಳನ್ನು ಶೈಕ್ಷಣಿಕ ಮಂಡಳಿ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

**ತೀರ್ಮಾನ : 2021–22ನೇ ಸಾಲಿನ January Cycle ಆವೃತ್ತಿಯ ವಿವರಣಾ ಪುಸ್ತಕಗಳನ್ನು ಅನುಸಮರ್ಥಿಸಿತು. M.A in Journalism and Mass Communication 2021–22ನೇ ಸಾಲಿಗೆ Non CBCS ರೂಪದಲ್ಲಿ ನೀಡಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.02

**ವಿಷಯ :** ಸಿಬಿಸಿಎಸ್ ಪದ್ದತಿಯ ಶಿಕ್ಷಣಕ್ರಮಗಳಲ್ಲಿನ Open Elective ಕೋರ್ಸ್ ಆಯ್ಕೆಗೆ ಕನಿಷ್ಠ ವಿದ್ಯಾರ್ಥಿಗಳ ಸಂಖ್ಯೆ ನಿಗದಿಪಡಿಸಿರುವ ಬಗ್ಗೆ.

****

ಸಿಬಿಸಿಎಸ್ ಪದ್ದತಿಯ ವಿವಿಧ ಶಿಕ್ಷಣಕ್ರಮಗಳ Open Elective ಕೋರ್ಸ್‌ಅನ್ನು ಆಯ್ಕೆ ಮಾಡಿಕೊಳ್ಳುವ ಕನಿಷ್ಠ ವಿದ್ಯಾರ್ಥಿಗಳನ್ನು ನಿಗದಿಪಡಿಸುವ ಸಂಬಂಧ ಆದೇಶ ಸಂಖ್ಯೆ:ಕರಾಮುವಿ/ಡೀನ್(ಶೈ)–07/2021–22, ದಿನಾಂಕ: 04–04–2022 ರಂದು ಕಛೇರಿ ಆದೇಶ ಹೊರಡಿಸಲಾಗಿತ್ತು. ಸದರಿ ಸಮಿತಿಯು ನಡೆದ ಸಭೆಯಲ್ಲಿ ಕನಿಷ್ಠ 20 ವಿದ್ಯಾರ್ಥಿಗಳ ಸಂಖ್ಯೆಗಿಂತಲೂ ಕಡಿಮೆ ವಿದ್ಯಾರ್ಥಿಗಳಿದ್ದರೆ ಅಂತಹ ಕೋರ್ಸ್‌ಗಳ ಪಾಠ, ಪ್ರವಚನ, ಎಸ್ಎಲ್ಎಮ್ ಸಿದ್ಧತೆ, ನಿರ್ವಹಣೆಗೆ ತೊಂದರೆ ಮತ್ತು ವಿ.ವಿ. ನಿಲಯದ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, 20 ವಿದ್ಯಾರ್ಥಿ ಸಂಖ್ಯೆಗಿಂತಲೂ ಕಡಿಮೆ ಬರುವ Open Elective ಕೋರ್ಸ್‌ಗಳನ್ನು ಆಯಾಯ ಪ್ರವೇಶಾತಿ ಆವೃತ್ತಿಯಲ್ಲಿ ಸ್ಥಗಿತಗೊಳಿಸಿ ಅಂತಹ ವಿದ್ಯಾರ್ಥಿಗಳು ಬೇರೆ Open Elective ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳುವುದು ಸೂಕ್ತವೆಂದು ಸಭೆಯಲ್ಲಿ ತೀರ್ಮಾನಿಸಲಾಗಿದ್ದು, ಅದರಂತೆ ಶೈಕ್ಷಣಿಕ ಮಂಡಳಿ ಮತ್ತು ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಕಛೇರಿ ಆದೇಶ ಹೊರಡಿಸಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ) ಈ ಸಂಬಂಧ ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಮತ್ತು ವ್ಯವಸ್ಥಾಪನಾ ಮಂಡಳಿ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

ತೀರ್ಮಾನ : **ಸಿಬಿಸಿಎಸ್ ಪದ್ದತಿಯ ಶಿಕ್ಷಣಕ್ರಮಗಳಲ್ಲಿನ Open Elective ಕೋರ್ಸ್ ಆಯ್ಕೆಗೆ ಕನಿಷ್ಠ ವಿದ್ಯಾರ್ಥಿಗಳ ಸಂಖ್ಯೆ ನಿಗದಿಪಡಿಸಿರುವ ಬಗ್ಗೆ ಸಭೆಯು ಅನುಸಮರ್ಥನೆಗೊಳಿಸಲಾಯಿತು. ಪ್ರವೇಶಾತಿ ಪೂರ್ಣಗೊಂಡ 15 ದಿನಗಳೊಳಗೆ ಇಂತಹ ಕಡಿಮೆ ಸಂಖ್ಯೆಯ ವಿದ್ಯಾರ್ಥಿಗಳು ಯಾವುದಾದರೂ ಒಂದು Open Elective ಕೋರ್ಸ್ ಆಯ್ಕೆ ಮಾಡಿಕೊಂಡಿದ್ದಲ್ಲಿ, ಅಂತಹ ವಿದ್ಯಾರ್ಥಿಗಳು ಬೇರೆ Open Elective ಕೋರ್ಸ್ ಆಯ್ಕೆ ಮಾಡಿಕೊಳ್ಳುವ ಸಂಬಂಧ ಕ್ರಮವಹಿಸಿ ಸಂಬಂಧಪಟ್ಟ ವಿಭಾಗಗಳಿಗೆ ಮಾಹಿತಿ ನೀಡುವಂತೆ ಪ್ರವೇಶಾತಿ ನಿರ್ದೇಶಕರಿಗೆ ಸೂಚಿಸಲು ತೀರ್ಮಾನಿಸಲಾಯಿತು. ಅಂತೆಯೇ ಸಾಫ್ಟ್ ಕೋರ್ ಆಯ್ಕೆಯಲ್ಲಿಯೂ ಸಹ ಇದೇ ಮಾನದಂಡವನ್ನು ಅನುಸರಿಸುವಂತೆ ತಿಳಿಸಲು ಸಭೆಯು ತೀರ್ಮಾನಿಸಿತು.**

**ಮುಂದುವರೆದು, ಮುಂದಿನ ಶೈಕ್ಷಣಿಕ ವರ್ಷಗಳಲ್ಲಿ ಪುಸ್ತಕಗಳು ಮುದ್ರಣಗೊಂಡು ವಿದ್ಯಾರ್ಥಿಗಳಿಗೆ ವಿತರಿಸಲಾಗದಿದ್ದಲ್ಲಿ ಯಾವ ಕ್ರಮವಹಿಸಬೇಕು ಎಂಬುವುದರ ಬಗ್ಗೆ ಪರಿಸ್ಥಿತಿಯನ್ನು ಅವಲೋಕಿಸಿ ಸೂಕ್ತ ನಿರ್ಧಾರವನ್ನು ಕೈಗೊಳ್ಳುವ ಬಗ್ಗೆ ಸಭೆಯು ನಿರ್ಧರಿಸಿತು.**

**ಅಲ್ಲದೇ, ಯಾವುದಾದರೂ ಕಾರ್ಯಕ್ರಮಕ್ಕೆ ಕನಿಷ್ಟ 20ಕ್ಕಿಂತ ಕಡಿಮೆ ಸಂಖ್ಯೆಯ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿದ್ದಲ್ಲಿ, ವಿದ್ಯಾರ್ಥಿಗಳ ಒಪ್ಪಿಗೆ ಮೇರೆಗೆ ಅವರನ್ನು ಮುಂದಿನ ಆವರ್ತನಕ್ಕೆ ಸೇರಿಸಲು ನಿರ್ಧರಿಸಲಾಯಿತು. ವಿದ್ಯಾರ್ಥಿಗಳು ಒಪ್ಪದಿದ್ದಲ್ಲಿ ಅವರ ಶುಲ್ಕವನ್ನು ಮರುಪಾವತಿಸಲು ತೀರ್ಮಾನಿಸಲಾಯಿತು. ಅಲ್ಲದೇ ಯಾವುದಾದರೂ ಸಾಫ್ಟ್ ಕೋರ್ ಪತ್ರಿಕೆ ಅಥವಾ ಜನರಿಕ್ ಎಲೆಕ್ಟಿವ್‌ಗೆ 20ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಬೇರೆ ಸಾಫ್ಟ್ ಕೋರ್ ಪತ್ರಿಕೆ ಅಥವಾ ಜನರಿಕ್ ಎಲೆಕ್ಟಿವ್ ಆಯ್ದುಕೊಳ್ಳಲು ಸೂಚಿಸಬಹುದು ಎಂದು ತೀರ್ಮಾನಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

**ವಿಷಯ ಸಂಖ್ಯೆ: 59.03**

**ವಿಷಯ:** ವಿವಿ ನಿಲಯದ ಎಲ್ಲಾ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಅಧ್ಯಕ್ಷರುಗಳಿಗೆ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡುವ ಬಗ್ಗೆ.

******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ಬೋಧಕ ವರ್ಗದವರಿಗೆ 15 ಸಾಂದರ್ಭಿಕ ರಜೆ ಹಾಗೂ ಎರಡು ನಿರ್ಬಂಧಿತ ರಜೆ ಮಂಜೂರು ಮಾಡಲು ಆದೇಶವಿರುತ್ತದೆ (ಪ್ರತಿ ಲಗತ್ತಿಸಿದೆ). ಆದರೆ ವಿಭಾಗದ ಅಧ್ಯಕ್ಷರುಗಳು Non Vacation ಬರುವುದರಿಂದ ಇದೇ ನಿಯಮ ಅನ್ವಯವಾಗುತ್ತದೆಯೇ ಅಥವಾ ಇವರಿಗೆ 10 ಸಾಂದರ್ಭಿಕ ರಜೆ ಮತು 2 ನಿರ್ಬಂಧಿತ ರಜೆ ಮಂಜೂರು ಮಾಡಬೇಕೆ ಎಂಬುದರ ಬಗ್ಗೆ ಶೈಕ್ಷಣಿಕ ಮಂಡಳಿ ಸಭೆ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

**ಚರ್ಚೆ : ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ02ಹೆಚ್‌ಹೆಚ್‌ಎಲ್2019, ದಿನಾಂಕ:12.06.2019 ಮತ್ತು ಸಿಆಸುಇ02ಹೆಚ್‌ಹೆಚ್‌ಎಲ್2019, ದಿನಾಂಕ:13.06.2019 ಅನುಸಾರ ಎರಡನೇ ಶನಿವಾರ ಹಾಗೂ ನಾಲ್ಕನೇ ಶನಿವಾರ ಸರ್ಕಾರಿ ರಜೆಗಳಿಗೆ ಸಾರ್ವತ್ರಿಕ ರಜೆಯೆಂದು ಘೋಷಿಸಿ ರಾಜ್ಯ ಸರ್ಕಾರಿ ನೌಕರರಿಗೆ ಇರುವ 15 ದಿನಗಳ ಸಾಂದರ್ಭಿಕ ರಜೆಯನ್ನು 10 ದಿನಗಳಿಗೆ ಇಳಿಸಲಾಗಿರುತ್ತದೆ. ಆದರೆ, ವಿವಿ ಆದೇಶ ಸಂಖ್ಯೆ: ಕರಾಮುವಿ/ಆವಿ/ಜಿಎಲ್–2/682/2009–10, ದಿನಾಂಕ:15.02.2020 ರ ಅನುಸಾರ ವಿವಿಯ ಭೋದಕ ವರ್ಗದವರಿಗೆ ಎರಡನೇ ಶನಿವಾರ ಹಾಗೂ ನಾಲ್ಕನೇ ಶನಿವಾರ ಕಡ್ಡಾಯವಾಗಿ ಕಾರ್ಯನಿರ್ವಹಿಸಲು ಮತ್ತು ಕ್ಯಾಲೆಂಡರ್ ಸಾಲಿನಲ್ಲಿ 15 ದಿನಗಳ ಸಾಂದರ್ಭಿಕ ರಜೆಯನ್ನು ಉಪಯೋಗಿಸಿಕೊಳ್ಳಲು ಆದೇಶಿಸಲಾಗಿತ್ತು.**

**ತೀರ್ಮಾನ: ವಿವಿ ನಿಲಯದ ಎಲ್ಲಾ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಅಧ್ಯಕ್ಷರುಗಳು ಹಾಗೂ ಭೋದಕರಿಗೆ ಎರಡನೇ ಶನಿವಾರ ಹಾಗೂ ನಾಲ್ಕನೇ ಶನಿವಾರ ಸಾರ್ವತ್ರಿಕ ರಜೆ ಘೋಷಿಸಿ 15 ದಿನಗಳ ಸಾಂದರ್ಭಿಕ ರಜೆಯನ್ನು 10 ದಿನಗಳಿಗೆ ಇಳಿಸಲು ಮತ್ತು 02 ದಿನ ನಿರ್ಬಂಧಿತ ರಜೆಯನ್ನು ನೀಡಲು ತೀರ್ಮಾನಿಸಲಾಯಿತು. ಸದರಿ ಸಾರ್ವತ್ರಿಕ ರಜೆಗಳನ್ನು ಮುಂದಿನ ಆದೇಶದ ನಂತರ ಜಾರಿಗೊಳಿಸಲು ತೀರ್ಮಾನಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.04

**ವಿಷಯ :** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಯುವ ರೆಡ್‌ಕ್ರಾಸ್ ಘಟಕ ಸ್ಥಾಪನೆ ಬಗೆಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಸರ್ಕಾರದ ಆದೇಶದಂತೆ, (Government Order NO: ED38Vivdha 2016, Dated; 17/06/2016, Bengaluru) ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯವರ ಪತ್ರ ಸಂಖ್ಯೆ:IRCS/YRC/REG/1119/2021-22, ದಿನಾಂಕ;17.01.2022 ಇವರ ಪತ್ರದನ್ವಯ ಯುವ ರೆಡ್‌ಕ್ರಾಸ್ ಸಂಸ್ಥೆಯನ್ನು ವಿದ್ಯಾರ್ಥಿಗಳ ಹಿತದೃಷ್ಟಿ, ಸಮಾಜ ಸೇವೆ, ಆರೋಗ್ಯ ಮಾನವಿಯತೆ ಹಾಗೂ ವಿ.ವಿ ನಿಲಯಕ್ಕೆ ನ್ಯಾಕ್ ಮಾನ್ಯತೆಯನ್ನು ಪಡೆಯುವ ನಿಟ್ಟಿನಲ್ಲಿ ವಿ.ವಿ ನಿಲಯದಲ್ಲಿ ಯುವ ರೆಡ್‌ಕ್ರಾಸ್ ಸಂಸ್ಥೆಯನ್ನು ಸ್ಥಾಪಿಸುವ ಸಂಬಂಧ ಆದೇಶ **ಸಂಖ್ಯೆ : ಕರಾಮುವಿ/ಡೀನ್(ಶೈ)–07/2021–22, ದಿನಾಂಕ : 05–04–2022** ರಂತೆ ಡಾ. ನಿರಂಜನ್ ರಾಜ್ .ಎಸ್, ಸಹಾಯಕ ಪ್ರಾಧ್ಯಾಪಕರು, ಸೂಕ್ಷ್ಮ ಜೀವಶಾಸ್ತ್ರ ಅಧ್ಯಯನ ವಿಭಾಗ ಕರಾಮುವಿ ಮೈಸೂರು, ಇವರನ್ನು ನೋಡೆಲ್ ಅಧಿಕಾರಿಯಾಗಿ ನೇಮಿಸಿ ಯುವ ರೆಡ್‌ಕ್ರಾಸ್ ಘಟಕ ಸ್ಥಾಪನೆಗೆ ಕ್ರಮವಹಿಸಿದೆ. (ಪ್ರತಿ ಲಗತ್ತಿಸಿದೆ) ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಮತ್ತು ವ್ಯವಸ್ಥಾಪನಾ ಮಂಡಳಿ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

**ತೀರ್ಮಾನ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಯುವ ರೆಡ್‌ಕ್ರಾಸ್ ಘಟಕ ಸ್ಥಾಪಿಸಿರುವುದನ್ನು ಹಾಗೂ ಡಾ. ನಿರಂಜನ ರಾಜ್ ಎಸ್., ಸಹಾಯಕ ಪ್ರಾಧ್ಯಾಪಕರು, ಸೂಕ್ಷ್ಮ ಜೀವಶಾಸ್ತ್ರ ಅಧ್ಯಯನ ವಿಭಾಗ ಇವರನ್ನು ನೋಡೆಲ್ ಅಧಿಕಾರಿಯನ್ನಾಗಿ ನೇಮಿಸಿರುವುದನ್ನು ಅನುಸಮರ್ಥನೆಗೊಳಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.05

**ವಿಷಯ :** ಉರ್ದು ಅಧ್ಯಯನ ವಿಭಾಗಕ್ಕೆ ಅಧ್ಯಯನ ಮಂಡಳಿಯ ಅಧ್ಯಕ್ಷರು/ ಸದಸ್ಯರನ್ನು ನೇಮಿಸುವ ಬಗ್ಗೆ.

****

ಉರ್ದು ಅಧ್ಯಯನ ವಿಭಾಗದಲ್ಲಿ ಖಾಯಂ ಅಧ್ಯಾಪಕರುಗಳಲ್ಲ ಕಾರಣ ಸದರಿ ಅಧ್ಯಯನ ವಿಭಾಗದ ಸಂಯೋಜನಾಧಿಕಾರಿಯಾಗಿ ತೆಲುಗು ಅಧ್ಯಯನ ವಿಭಾಗದ ಅಧ್ಯಕ್ಷರನ್ನು ನೇಮಿಸಿ ಆದೇಶ ಹೊರಡಿಸಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ.) ಸದರಿ ಅಧ್ಯಯನ ವಿಭಾಗಕ್ಕೆ ಇಬ್ಬರು ಗುತ್ತಿಗೆ ಆಧಾರಿತ ಸಹಾಯಕ ಪ್ರಾಧ್ಯಾಪಕರನ್ನು ನೇಮಿಸಲಾಗಿರುತ್ತದೆ. ಇತರೆ ವಿಶ್ವವಿದ್ಯಾನಿಲಯಗಳಲ್ಲಿ ಉರ್ದು ವಿಷಯಕ್ಕೆ ಸಂಬಂಧಿಸಿದ ಖಾಯಂ ಅಧ್ಯಾಪಕರ ಕೊರತೆಯಿದ್ದು, ಕರಾಮುವಿಯ ಅಧ್ಯಯನ ಮಂಡಳಿ ಸಭೆಗೆ ಎಲ್ಲಾ ಬಾಹ್ಯ ಪರಿಣಿತರನ್ನೆ ನೇಮಿಸಿದಲ್ಲಿ, ಕರಾಮುವಿಯ ಅಧ್ಯಯನ ಮಂಡಳಿಯ ಸಭೆಗಳನ್ನು ಸಮರ್ಪಕವಾಗಿ ನಡೆಸಲು ಕಷ್ಟಕರವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಉರ್ದು ಅಧ್ಯಯನ ಮಂಡಳಿ ರಚನೆ ಸಂಬಂಧ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕೆ ವಿಷಯ ಮಂಡಿಸಿದೆ.

<u>ತೀರ್ಮಾನ</u> : **ಉರ್ದು ಅಧ್ಯಯನ ಮಂಡಳಿಗೆ ಸದಸ್ಯರನ್ನಾಗಿ ನೇಮಿಸಲು ಸೂಕ್ತ ಅಧ್ಯಾಪಕರ ಕೊರತೆ ಇರುವ ಕಾರಣ ಇದನ್ನು ವಿಶೇಷ ಪ್ರಕರಣವೆಂದು ಭಾವಿಸಿ ಗುತ್ತಿಗೆ ಆಧಾರಿತ ಸಹಾಯಕ ಪ್ರಾಧ್ಯಾಪಕರನ್ನು ಸದಸ್ಯರನ್ನಾಗಿ ನೇಮಿಸಲು ನಿರ್ಧರಿಸಿತು. ಮುಂದುವರೆದು, ಇತರೆ ವಿಶ್ವವಿದ್ಯಾನಿಲಯಗಳಲ್ಲಿ ಲಭ್ಯವಿರುವ ಯಾರಾದರೂ ಒಬ್ಬರು ಪರಿಣಿತರನ್ನು ಅಧ್ಯಯನ ಮಂಡಳಿಯ ಅದ್ಯಕ್ಷರಾಗಿ ನೇಮಿಸಲು ತೀರ್ಮಾನಿಸಲಾಯಿತು. ಸದರಿ ಮಾನದಂಡವನ್ನು ಸಂಸ್ಕೃತ ಹಾಗೂ ಗಣಿತಶಾಸ್ತ್ರ ವಿಭಾಗಕ್ಕೂ ಸಹ ಅನ್ವಯಿಸಲು ನಿರ್ಧರಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.06

**ವಿಷಯ**: ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕಾತಿ ಮಾಡಿರುವ ಬಗ್ಗೆ.

* * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಅಧ್ಯಕ್ಷರಾಗಿದ್ದ ಡಾ. ವಿ. ಮಹೇಶ, ಸಹಾಯಕ ಪ್ರಾಧ್ಯಾಪಕರು, ಇವರನ್ನು ವಿಭಾಗದ ಅಧ್ಯಕ್ಷರ ಹುದ್ದೆಯಿಂದ ಬಿಡುಗಡೆಗೊಳಿಸಿ, ಸುಗಮ ಆಡಳಿತಾತ್ಮಕ/ ಶೈಕ್ಷಣಿಕ ಹಿತದೃಷ್ಠಿಯಿಂದ ವಾಣಿಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ. ಉಷಾ ಸಿ., ಇವರನ್ನು ತಕ್ಷಣದಿಂದ ಜಾರಿಗೆ ಬಂದಂತೆ (ದಿನಾಂಕ: 23.02.2022 ರಿಂದ 23–02–2024 ರವರೆಗೆ) ವಿಭಾಗದ ಅಧ್ಯಕ್ಷರನ್ನಾಗಿ ಮುಂದಿನ ಎರಡು ವರ್ಷ ಅಥವಾ ಮುಂದಿನ ಆದೇಶದವರೆಗೆ ಮಾನ್ಯ ಕುಲಪತಿಗಳ ಅನುಮೋದನೆಯಂತೆ ನೇಮಿಸಿ ಆದೇಶ ಹೊರಡಿಸಲಾಗಿದೆ. ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಅನುಸಮರ್ಥನೆಗಾಗಿ ಮಂಡಿಸಿದೆ.

ತೀರ್ಮಾನ : **ವಾಣಿಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ವಿ. ಮಹೇಶ, ಸಹಾಯಕ ಪ್ರಾಧ್ಯಾಪಕರು, ಇವರನ್ನು ವಿಭಾಗದ ಅಧ್ಯಕ್ಷರ ಹುದ್ದೆಯಿಂದ ಬಿಡುಗಡೆಗೊಳಿಸಿ, ಸುಗಮ ಆಡಳಿತಾತ್ಮಕ/ ಶೈಕ್ಷಣಿಕ ಹಿತದೃಷ್ಠಿಯಿಂದ, ವಾಣಿಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ. ಉಷಾ ಸಿ., ವಾಣಿಜ್ಯಶಾಸ್ತ್ರ ವಿಭಾಗ, ಇವರನ್ನು ದಿನಾಂಕ: 23.02.2022 ರಿಂದ ವಿಭಾಗದ ಅಧ್ಯಕ್ಷರನ್ನಾಗಿ ನೇಮಿಸಿರುವುದನ್ನು ಅನುಸಮರ್ಥನೆಗೊಳಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.07

**ವಿಷಯ:** ನಿರ್ವಹಣಾಶಾಸ್ತ್ರ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕಾತಿ ಮಾಡಿರುವ ಬಗ್ಗೆ.
**ಉಲ್ಲೇಖ:** ಮಾನ್ಯ ಕುಲಪತಿಗಳ ಟಿಪ್ಪಣಿ ಸಂಖ್ಯೆ: ಕರಾಮುವಿ/ವಿಸಿಪಿಎಸ್/2021–22, ದಿನಾಂಕ:17.03.2022

* * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ನಿರ್ವಹಣಾಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಅಧ್ಯಕ್ಷರಾಗಿದ್ದ ಡಾ. ಸಿ. ಮಹದೇವಮೂರ್ತಿ, ಪ್ರಾಧ್ಯಾಪಕರು, ಇವರನ್ನು ವಿಭಾಗದ ಅಧ್ಯಕ್ಷರ ಹುದ್ದೆಯಿಂದ ಬಿಡುಗಡೆಗೊಳಿಸಿ, ಸುಗಮ ಆಡಳಿತಾತ್ಮಕ/ ಶೈಕ್ಷಣಿಕ ಹಿತದೃಷ್ಠಿಯಿಂದ ನಿರ್ವಹಣಾಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಸವಿತ. ಪಿ., ಇವರನ್ನು ತಕ್ಷಣದಿಂದ ಜಾರಿಗೆ ಬಂದಂತೆ (ದಿನಾಂಕ: 17.03.2022 ರಿಂದ) ವಿಭಾಗದ ಅಧ್ಯಕ್ಷರನ್ನಾಗಿ ಮುಂದಿನ ಆದೇಶದವರೆಗೆ ಮಾನ್ಯ ಕುಲಪತಿಗಳ ಅನುಮೋದನೆಯಂತೆ ನೇಮಿಸಿ ಆದೇಶ ಹೊರಡಿಸಲಾಗಿದೆ. ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಅನುಸಮರ್ಥನೆಗಾಗಿ ಮಂಡಿಸಿದೆ.

<u>ತೀರ್ಮಾನ</u> : **ನಿರ್ವಹಣಾಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಅಧ್ಯಕ್ಷರಾಗಿದ್ದ ಡಾ.ಸಿ. ಮಹದೇವಮೂರ್ತಿ, ಪ್ರಾಧ್ಯಾಪಕರು, ಇವರನ್ನು ವಿಭಾಗದ ಅಧ್ಯಕ್ಷರ ಹುದ್ದೆಯಿಂದ ಬಿಡುಗಡೆಗೊಳಿಸಿ, ಸುಗಮ ಆಡಳಿತಾತ್ಮಕ/ ಶೈಕ್ಷಣಿಕ ಹಿತದೃಷ್ಠಿಯಿಂದ ನಿರ್ವಹಣಾಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಸವಿತ. ಪಿ., ಇವರನ್ನು ದಿನಾಂಕ: 17.03.2022 ರಿಂದ ವಿಭಾಗದ ಅಧ್ಯಕ್ಷರನ್ನಾಗಿ ನೇಮಿಸಿರುವುದನ್ನು ಅನುಸಮರ್ಥನೆಗೊಳಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.08

**ವಿಷಯ:** Dr. BabaSaheb Ambedkar Open University, Gujarat., ಇವರೊಂದಿಗೆ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ.

* * * *

Prof. Ami Upadhay, Vice Chancellor, Dr. BabaSaheb Ambedkar Open University, Gujarat., ಇವರು ದಿನಾಂಕ:13.05.2022ರಂದು ಮಾನ್ಯ ಕುಲಪತಿಗಳ ಕಚೇರಿಗೆ email ಪತ್ರವನ್ನು ಕಳುಹಿಸಿ, ಕೆಲವು ಶೈಕ್ಷಣಿಕ ಕಾರ್ಯಕ್ರಮಗಳು ಮತ್ತು ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ ಕರಾಮುವಿಯೊಂದಿಗೆ MOU ಮಾಡಿಕೊಳ್ಳುವ ಸಂಬಂಧ ತೀರ್ಮಾನ ತಿಳಿಸಲು ಕೋರಿರುತ್ತಾರೆ.

ಕರಾಮುವಿಯು ನ್ಯಾಕ್ ಮಾನ್ಯತೆ ಪಡೆಯಲು **Creteria-1.2.1** ರನ್ವಯ ಇತರೆ ವಿಶ್ವವಿದ್ಯಾನಿಲಯದೊಂದಿಗೆ ಶೈಕ್ಷಣಿಕ ಕಾರ್ಯಕ್ರಮಗಳ ಕೊಡುವಿಕೆ, ಕೊಳ್ಳುವಿಕೆ ಚಟುವಟಿಕೆಗೆ **10 ಅಂಕಗಳನ್ನು** ನಿರ್ದಿಷ್ಟ ಪಡಿಸಿದೆ. ಈ ಹಿನ್ನೆಲೆಯಲ್ಲಿ ಸದರಿ ಸಂಬಂಧ ಒಡಂಬಡಿಕೆ ಅಗತ್ಯವಾಗಿರುತ್ತದೆ.

**Dr. BabaSaheb Ambedkar Open University, Gujarat**.,ರವರು ನೀಡಿರುವ **Agreement**ನ ಕರಡು ಪ್ರತಿಯ ಅನುಸಾರ–––

1. THE LICENSEE would enable the use of the instructional material of listed programmes as specified in this agreement for the Academic programmes/courses offered by the licensee for an initial period of **three years,** from the date of this agreement.
2. This Agreement shall become effective as of the date of its execution (signing the document) and shall continue in effect for a period of **two (2) years** from the date of execution. This agreement may be renewed by mutual **written** agreement of both Parties for successive additional **one (1) year term**.
3. The Licenser University can also use the study material developed and lincensed by the Licensee University for its own learners on the same terms and conditions. ಈ ಅಂಶಗಳನ್ನು ಅವಗಾಹನೆಗೆ ತರಲಾಗಿದೆ.

Dr. BabaSaheb Ambedkar Open University, Gujarat., ಇವರು ಕರಾಮುವಿಗೆ ನೀಡಬಹುದಾದ ಸುಮಾರು 21 ಶೈಕ್ಷಣಿಕ ಕಾರ್ಯಕ್ರಮಗಳ ಪಟ್ಟಿಯನ್ನು ನೀಡಿರುತ್ತಾರೆ. (Annexure-I ಲಗತ್ತಿಸಿದೆ).

ಸದರಿ ಕಾರ್ಯಕ್ರಮಗಳ ಪಟ್ಟಿಯಲ್ಲಿ ಕರಾಮುವಿ ನಡೆಸುತ್ತಿರುವ Programmeಗಳನ್ನು ಬಿಟ್ಟು ಪ್ರಚಲಿತಕ್ಕೆ ಅವಶ್ಯವಿರುವ, ಮತ್ತು ವಿದ್ಯಾರ್ಥಿಗಳಿಂದ ಬೇಡಿಕೆ ಇರುವ ಶಿಕ್ಷಣಕ್ರಮವನ್ನು ಆಯ್ದುಗೊಂಡು ನಮ್ಮಲ್ಲಿ ಪ್ರವೇಶಾತಿ ನಡೆಸಿದರೆ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕವಾಗಿ/ಶೈಕ್ಷಣಿಕವಾಗಿ ಅನುಕೂಲವಾಗಬಹುದಾಗಿದೆ.

- Bachelor of Social Work (BSW)
- Master of Social Work (MSW)
- Bachelor of Business Administration – Air Travel Management (BBA-ATM)
- Bachelor of Computer Application- Multimedia (BCA-MUL)
- Master of Science- Cyber Security (Msc.CS)

ಈ ಮೇಲಿನ Programmeಗಳು ಕರಾಮುವಿಯಲ್ಲಿ ನಡೆಸುತ್ತಿಲ್ಲ. ಇವುಗಳಲ್ಲಿ ಕೆಲವು Programmeಗಳನ್ನು ಆಯ್ಕೆ ಮಾಡಿಕೊಂಡು ಒಡಂಬಡಿಕೆ ಮಾಡಿಕೊಳ್ಳುವ ಸಂಬಂಧ ಶೈಕ್ಷಣಿಕ ಮಂಡಳಿಯ ಚರ್ಚೆ ಮತ್ತು ನಿರ್ಣಯಕ್ಕೆ ಮಂಡಿಸಿದೆ.

<u>ತೀರ್ಮಾನ</u> : **Dr. BabaSaheb Ambedkar Open University, Gujarat., ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಒಪ್ಪಲಾಯಿತು. ಈ ವಿಷಯದಲ್ಲಿ ಪ್ರಸ್ತಾಪಿಸಿರುವ ಕಾರ್ಯಕ್ರಮಗಳಷ್ಟೇ ಅಲ್ಲದೇ ಅವರು ಅನುಬಂಧದಲ್ಲಿ ನೀಡಿರುವ ಎಲ್ಲಾ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಬಹುದೆಂದು ತೀರ್ಮಾನಿಸಲಾಯಿತು. ಸದರಿ ಸಿದ್ಧಪಾಠಗಳನ್ನು ಅಳವಡಿಸಿಕೊಳ್ಳುವುದರ ಸಂಬಂಧ, ಸಂಬಂಧಿತ ವಿಭಾಗದವರಿಗೆ, Dr. BabaSaheb Ambedkar Open University, ಅವರ ಜಾಲತಾಣದಲ್ಲಿ ಲಭ್ಯವಿರುವ ಸಿದ್ಧಪಾಠಗಳನ್ನು ಡೌನ್‌ಲೋಡ್ ಮಾಡಿಕೊಂಡು ಪರಿಶೀಲಿಸಿ ಅವುಗಳನ್ನು ಅಳವಡಿಸಿಕೊಳ್ಳುವುದರ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಸೂಚಿಸಲು ತೀರ್ಮಾನಿಸಲಾಯಿತು. ಮುಂದುವರೆದು, ಸದರಿ ವಿಶ್ವವಿದ್ಯಾನಿಲಯಕ್ಕೆ ಕರಾಮುವಿಯ ಯಾವ ಕಾರ್ಯಕ್ರಮದ ಸಿದ್ಧಪಾಠಗಳನ್ನು ನೀಡಬೇಕೆಂಬ ವಿಷಯದಲ್ಲಿ ತೀರ್ಮಾನ ತೆಗೆದುಕೊಳ್ಳುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.09

**ವಿಷಯ :** ಯುಜಿಸಿಯ ಗೈಡ್‌ಲೈನ್ಸ್ ಪ್ರಕಾರದಂತೆ Pursuing two Academic Programmes Simultaneously ಎಂಬ ನಿಯಮವನ್ನು ಕರಾಮುವಿಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ.

****

ಯುಜಿಸಿ ಕಾರ್ಯದರ್ಶಿಯವರ ಪತ್ರದ ಸಂಖ್ಯೆ:D.O.No.1.6/2007 (CPP-II) (New), ದಿನಾಂಕ:13–04–2022ರ ಪತ್ರದಲ್ಲಿ ವಿದ್ಯಾರ್ಥಿಗಳು ಏಕಕಾಲದಲ್ಲಿ ಎರಡು ಪದವಿಗಳನ್ನು ಅಧ್ಯಯನ ಮಾಡಲು ಅವಕಾಶ ನೀಡಿ Pursuing two Academic Programmes Simultaneouslyಅನ್ನು ಅಧಿಸೂಚನೆಗೊಳಿಸಿದ್ದು, ಎಲ್ಲಾ ವಿಶ್ವವಿದ್ಯಾನಿಲಯಗಳು ಸದರಿ ಗೈಡ್‌ಲೈನ್ಸ್ ಅನ್ನು ಅಳವಡಿಸಿಕೊಂಡು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿಕೊಡಲು ಸೂಚಿಸಿದೆ.

1. ಸದರಿ ಮಾರ್ಗಸೂಚಿಗಳನ್ನು ಯುಜಿಸಿಯು NEP ಆಶಯದೊಂದಿಗೆ ಸಿದ್ಧಪಡಿಸಿದೆ.
2. ವಿದ್ಯಾರ್ಥಿಯು ODL Modeನಲ್ಲಿ ಏಕಕಾಲದಲ್ಲಿ ಎರಡು ಶೈಕ್ಷಣಿಕ ಕಾರ್ಯಕ್ರಮಗಳನ್ನು ಪೂರ್ಣಗೊಳಿಸಬಹುದು.
3. ಯಾವುದೇ ವಿದ್ಯಾರ್ಥಿಯು ಸಾಂಪ್ರದಾಯಿಕ ವಿ.ವಿ ಯಲ್ಲಿ ಒಂದು ಶೈಕ್ಷಣಿಕ ಕಾರ್ಯಕ್ರಮ, ಮತ್ತೊಂದು ಶೈಕ್ಷಣಿಕ ಕಾರ್ಯಕ್ರಮವನ್ನು ODL Modeನಲ್ಲಿ ಮಾಡಬಹುದು.
4. ಈ ಮಾರ್ಗಸೂಚಿಯು ಪಿಹೆಚ್.ಡಿ ಕಾರ್ಯಕ್ರಮಕ್ಕೆ ಅನ್ವಯಿಸುವುದಿಲ್ಲ.
5. ಈ ಗೈಡ್‌ಲೈನ್ಸ್ ಬರುವುದಕ್ಕೆ ಹಿಂದೆಯೇ ಎರಡು ಪದವಿಗಳನ್ನು ಏಕಕಾಲದಲ್ಲಿ ಪೂರ್ಣಗೊಳಿಸಿದ್ದಲ್ಲಿ, ಅದು ಅಂಗೀಕೃತವಾಗುವುದಿಲ್ಲ.

ಈ ಹಿನ್ನೆಲೆಯಲ್ಲಿ ಕರಾಮುವಿಯು ಯುಜಿಸಿ ಮಾರ್ಗಸೂಚಿಗಳನ್ವಯ, ವಿ.ವಿಗೆ ಅನ್ವಯವಾಗುವಂತೆ ಮಾರ್ಗಸೂಚಿಯನ್ನು ಸಿದ್ಧಪಡಿಸಿದ್ದು, ಸದರಿ ಮಾರ್ಗಸೂಚಿಗಳನ್ನು 2022–23 ರ ಜುಲೈ ಆವೃತ್ತಿಯ ಪ್ರವೇಶಾತಿಯಿಂದ ಅಳವಡಿಸಿಕೊಂಡು ಅನುಷ್ಠಾನಗೊಳಿಸುವ ಸಂಬಂಧವಾಗಿ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

<u>ತೀರ್ಮಾನ</u> : **ಏಕಕಾಲಕ್ಕೆ ಎರಡು ODL ಕಾರ್ಯಕ್ರಮಕ್ಕೆ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳ ವಿವರಗಳನ್ನು ಪ್ರವೇಶಾತಿ ಮುಗಿದ ತಕ್ಷಣವೇ ಪರೀಕ್ಷಾ ವಿಭಾಗಕ್ಕೆ ಸಲ್ಲಿಸಿ ಅದಕ್ಕೆ ಅನುಗುಣವಾಗಿ ಪರೀಕ್ಷಾ ವೇಳಾಪಟ್ಟಿ ನಿಗದಿಪಡಿಸುವಂತೆ ಸೂಚಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.10

**ವಿಷಯ:** UGC, ODL and OL ನಿಯಮಾವಳಿ 2020 ರಂತೆ ಆಯ್ಕೆ ಆಧಾರಿತ ಕಲಿಕಾ ಪದ್ಧತಿ (CBCS)ನ ಆಹಾರ ವಿಜ್ಞಾನ ಮತ್ತು ಪೌಷ್ಠಿಕತೆ ಅಧ್ಯಯನ ವಿಭಾಗದ ಸ್ನಾತಕ ಮತ್ತು ಸ್ನಾತಕೋತ್ತರ ಶಿಕ್ಷಣಕ್ರಮಗಳ ಪಠ್ಯಕ್ರಮವನ್ನು ಅನುಮೋದಿಸುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ UGC, ODL and OL ನಿಯಮಾವಳಿ 2020 ರಂತೆ ಆಯ್ಕೆ ಆಧಾರಿತ ಕಲಿಕಾ ಪದ್ಧತಿ (CBCS)ಯ ಪಠ್ಯಕ್ರಮಗಳನ್ನು 2021 ಜುಲೈ ಆವರ್ತನಕ್ಕೆ ಅಳವಡಿಸಿಕೊಳ್ಳುವ ಸಂಬಂಧ ಆಹಾರ ವಿಜ್ಞಾನ ಮತ್ತು ಪೌಷ್ಠಿಕತೆ ಅಧ್ಯಯನ ವಿಭಾಗದ ಸ್ನಾತಕ ವಿಷಯಗಳಾದ B.Sc in Food Science and Nutrition, B.Sc (Hons) in Home Science ಮತ್ತು ಸ್ನಾತಕೋತ್ತರ ವಿಷಯಗಳಾದ M.Sc in Clinical Nutrition and Dietetics, M.Sc in Food and Nutrition Sciences ನ ಪಠ್ಯಕ್ರಮಗಳಿಗೆ ಶೈಕ್ಷಣಿಕ ಮಂಡಳಿಯ ಅನುಮೋದನೆ ಕಾಯ್ದಿರಿಸಿ ಬರವಣಿಗೆ ಆದೇಶಗಳನ್ನು ನೀಡಲಾಗಿರುವುದು.

M.Sc in Food Science and Nutrition ನ ಪಠ್ಯಕ್ರಮವನ್ನು ಈಗಾಗಲೇ ಶೈಕ್ಷಣಿಕ ಮಂಡಳಿಯಲ್ಲಿ ಅನುಮೋದನೆ ಪಡೆಯಲಾಗಿದೆ. ಪ್ರಸ್ತುತ, ಸದರಿ ವಿಷಯದ Nomenclature ಆಗಿ M.Sc in Food and Nutrition Sciences ಆಗಿ ಬದಲಾಯಿಸಲು ಮತ್ತು ಪಠ್ಯಕ್ರಮಗಳಿಗೆ ಶೈಕ್ಷಣಿಕ ಮಂಡಳಿಯ ಅನುಸಮರ್ಥನೆಗಾಗಿ ವಿಷಯವನ್ನು ಮಂಡಿಸಿದೆ.

**ತೀರ್ಮಾನ : M.Sc in Food and Nutrition Sciences ಆಗಿ ಬದಲಾಯಿಸಲು ಮತ್ತು ಪಠ್ಯಕ್ರಮಗಳಿಗೆ ಶೈಕ್ಷಣಿಕ ಮಂಡಳಿಯ ಸಭೆಯು ಅನುಸಮರ್ಥಿಸಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.11

**ವಿಷಯ:** ಮಹಿಳಾ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ಪ್ರಾರಂಭಿಸಲು ಉದ್ದೇಶಿಸಲಾಗಿರುವ ಎಂ.ಎ ಮಹಿಳಾ ಅಧ್ಯಯನ ಮತ್ತು ಮಹಿಳಾ ಅಧ್ಯಯನ ಸರ್ಟಿಫಿಕೇಟ್ ಶಿಕ್ಷಣಕ್ರಮಗಳ ಅಧ್ಯಯನ ಸಾಮಗ್ರಿಗಳನ್ನು ಹೊಸದಾಗಿ ಸಿದ್ಧಪಡಿಸಲು/ಬರೆಸಲು ವಿವಿ ನಿಲಯದ ಅಧ್ಯಾಪಕರುಗಳಿಗೆ ಸಂಭಾವನೆಯನ್ನು ನಿಗದಿ ಪಡಿಸಲು ಹಾಗೂ ಅಂತಹ ಬರಹಗಾರರನ್ನು ಗುರುತಿಸಲು ಶೈಕ್ಷಣಿಕ ಮಾನದಂಡ ನಿಗದಿಪಡಿಸುವ ಬಗ್ಗೆ.

*********

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಹಿಳಾ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ಪ್ರಾರಂಭಿಸಲು ಉದ್ದೇಶಿಸಲಾಗಿರುವ ಎಂ.ಎ ಮಹಿಳಾ ಅಧ್ಯಯನ ಮತ್ತು ಮಹಿಳಾ ಅಧ್ಯಯನ ಸರ್ಟಿಫಿಕೇಟ್ ಶಿಕ್ಷಣಕ್ರಮಗಳ ಸಿದ್ಧಪಾಠಗಳನ್ನು ಬರೆಸಲು ಸದರಿ ಅಧ್ಯಯನ ವಿಭಾಗದಲ್ಲಿ ಅಧ್ಯಾಪಕರುಗಳು ಇಲ್ಲದೇ ಇರುವುದರಿಂದ ವಿ.ವಿ ನಿಲಯದ ಇತರ ವಿಭಾಗಗಳಲ್ಲಿನ ಅರ್ಹ ಅಧ್ಯಾಪಕರುಗಳಿಂದ ಸಿದ್ಧಪಡಿಸಿಕೊಳ್ಳಬೇಕಾಗಿದೆ. ಇದು ಇತರೆ ಅಧ್ಯಾಪಕರುಗಳ ವರ್ಕ್‌ಲೋಡ್‌ಗಿಂತ ಹೆಚ್ಚುವರಿ ಕಾರ್ಯಭಾರವಾಗಿರುವುದರಿಂದ ಇದನ್ನು ವಿಶೇಷ ಸಂದರ್ಭ ಎಂದು ಪರಿಗಣಿಸಿ ಬರಹಗಾರರಿಗೆ ಸಂಭಾವನೆಯನ್ನು ನಿಗದಿಗೊಳಿಸಬೇಕಾಗಿದೆ.

ವಿ.ವಿ ನಿಲಯವು Choice Based Credit System (CBCS) ಹಾಗೂ Dilploma Certificate/Non CBCS, ಶಿಕ್ಷಣಕ್ರಮಗಳಿಗೆ ಅಧ್ಯಯನ ಸಾಮಗ್ರಿಗಳನ್ನು ರಚಿಸಲು/ಪಠ್ಯ ಬರವಣಿಗೆಗೆ ಸಂಭಾವನೆಯನ್ನು ನಿಗದಿಗೊಳಿಸಿ ಕಚೇರಿ ಆದೇಶ ಸಂಖ್ಯೆ ಕರಾಮುವಿ/ಡೀನ್(ಶೈಕ್ಷಣಿಕ)/08/ಅಧ್ಯಯನ ಸಾಮಾಗ್ರಿಗಳ ಸಂಭಾವನೆ/118/2021–22,ದಿನಾಂಕ:24–02–2022 ರಂದು ಕಚೇರಿ ಆದೇಶ ಹೊರಡಿಸಲಾಗಿದೆ.(ಪ್ರತಿ ಲಗತಿಸಿದೆ) ಸದರಿ ಆದೇಶದಲ್ಲಿ ಹೊರಗಿನ ತಜ್ಞರುಗಳಿಗೆ ಯುಜಿಸಿ ನಿಯಮದನ್ವಯ ಪ್ರತಿ ಯುನಿಟ್‌ಗೆ (ಸಿಬಿಸಿಎಸ್) ಪದ್ಧತಿಯಲ್ಲಿ ಸಿದ್ದಪಾಠಗಳನ್ನು ಬರೆಯಲು ರೂ. 8,000/– (ಎಂಟು ಸಾವಿರ ರೂಗಳು) ಗಳನ್ನು ನಿಗದಿಪಡಿಸಲಾಗಿದೆ. ಸದರಿ ಸಂಭಾವನೆಯಲ್ಲಿ ರೂ. 3,000/– (ಮೂರು ಸಾವಿರ ರೂಗಳು) ಗಳನ್ನು ಕಡಿತಗೊಳಿಸಿ ರೂ. 5,000/– (ಐದು ಸಾವಿರ ರೂಗಳು) ಗಳನ್ನು ವಿವಿಯ ಅಧ್ಯಾಪಕರುಗಳಿಗೆ ನಿಗದಿಪಡಿಸಲು ಹಾಗೂ ಸದರಿ ಶಿಕ್ಷಣಕ್ರಮಗಳ ಸಿದ್ದಪಾಠಗಳನ್ನು ರಚಿಸಲು ಸದರಿ ವಿಷಯದಲ್ಲಿ ಸಾಂಪ್ರದಾಯಿಕ ಶಿಕ್ಷಣ ಹೊಂದಿರುವ ಹಾಗೂ ವಿವಿಧ ವಿಶ್ವವಿದ್ಯಾನಿಲಯ/ಶಿಕ್ಷಣ ಸಂಸ್ಥೆಗಳಲ್ಲಿ ಮಹಿಳಾ ಅಧ್ಯಯನ ವಿಭಾಗದಲ್ಲಿ ಅಧ್ಯಾಪಕರ ಸಂಖ್ಯೆ ಕಡಿಮೆ ಇರುವುದರಿಂದ, ಸಿದ್ದಪಾಠ ಬರಹಗಾರರ ಶೈಕ್ಷಣಿಕ ಅರ್ಹತೆ/ ಮಾನದಂಡದ ಕುರಿತು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯ್ಕಾಗಿ ಮಂಡಿಸಿದೆ.

**<u>ತೀರ್ಮಾನ</u> : ಕರಾಮುವಿಯ ವಿವಿಧ ವಿಭಾಗದ ಅಧ್ಯಾಪಕರಿಗೆ ಸಿದ್ಧಪಾಠ ರಚನೆಗೆ ಸಂಭಾವನೆ ನೀಡುವುದು ಸರಿಯಾದ ಕ್ರಮವಲ್ಲ ಎಂದು ತೀರ್ಮಾನಿಸಲಾಯಿತು. ಅಂತಹ ಬರಹಗಾರರ ಶೈಕ್ಷಣಿಕ ಅರ್ಹತೆ ಹಾಗೂ ಮಾನದಂಡದ ಕುರಿತು ಮಹಿಳಾ ಅಧ್ಯಯನ ಕೇಂದ್ರದ ಅಧ್ಯಯನ ಮಂಡಳಿ ಸಭೆಯಲ್ಲಿ ಸೂಕ್ತ ನಿರ್ಣಯ ಕೈಗೊಳ್ಳುವಂತೆ ತಿಳಿಸಲು ನಿರ್ಧರಿಸಲಾಯಿತು.**

**ಕುಲಸಚಿವರು** | **ಕುಲಪತಿಗಳು**

## ವಿಷಯ ಸಂಖ್ಯೆ: 59.12

**ವಿಷಯ :** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ಸ್ಥಾಪಿಸಲು ಉದ್ದೇಶಿಸಲಾಗಿರುವ ನಾಲ್ಕು ಅಧ್ಯಯನ ಪೀಠಗಳ ಕರಡು ಪರಿನಿಯಮಗಳನ್ನು ಪರಿಷ್ಕರಿಸುವ ಬಗೆಗೆ.

**ಉಲ್ಲೇಖ :** 1. 17ನೇ ವಿಶೇಷ ಶೈಕ್ಷಣಿಕ ಮಂಡಳಿಯ ಅನುಮೋದನೆ ದಿನಾಂಕ: 25–06–2021.
2. 165ನೇ ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ದಿನಾಂಕ: 03–07–2021.
3. 54ನೇ ವಿಶೇಷ ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ದಿನಾಂಕ: 17–08–2021.
4. ಸರ್ಕಾರದ ಪತ್ರ ಸಂಖ್ಯೆ ಇಡಿ 38 ಯುಓವಿ 2021, ದಿನಾಂಕ: 11–03–2022.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ಈ ಕೆಳಕಂಡ ನಾಲ್ಕು ಅಧ್ಯಯನ ಪೀಠಗಳನ್ನು ಸ್ಥಾಪಿಸುವ ಸಂಬಂಧ ಉಲ್ಲೇಖಿತ 1,2,3 ರ ಶಾಸನಬದ್ಧ ಪ್ರಾಧಿಕಾರಗಳಿಂದ ಅನುಮೋದನೆ ಪಡೆದು ಸರ್ಕಾರಕ್ಕೆ ಕಳುಹಿಸಿಕೊಡಲಾಗಿತ್ತು.

1. ಪದ್ಮಭೂಷಣ ಡಾ. ಬಾಲಗಂಗಾಧರನಾಥ ಸ್ವಾಮಿಜಿ, ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಠ.
2. ಪದ್ಮಭೂಷಣ ಡಾ. ಶಿವಕುಮಾರ ಸ್ವಾಮಿಜಿ, ಶ್ರೀ ಕ್ಷೇತ್ರ ಸಿದ್ಧಗಂಗಾ ಮಠ.
3. ಶ್ರೀ. ಅನಂತಕುಮಾರ, ಮಾಜಿ ಮಂತ್ರಿಗಳು, ಕೇಂದ್ರ ಸರ್ಕಾರ.
4. His Holiness Jagadguru Dr. Shivarathri Rajendra Mahaswamiji Suttur Mutt, Mysuru.

ಆದರೆ, ಈ ಮೇಲಿನ ನಾಲ್ಕು ಪರಿನಿಯಮಗಳಲ್ಲಿ Dr. Shivarathri Rajendra Mahaswamiji Suttur Mutt, Mysuru ಕೆಲವೊಂದು ಲೋಪದೋಷಗಳಿದ್ದು, ಅವುಗಳನ್ನು ಸರಿಪಡಿಸಿ ಪರಿಷ್ಕೃತ ಕರಡು ಪರಿನಿಯಮವನ್ನು ಸಲ್ಲಿಸಲು ಉಲ್ಲೇಖ (04)ರ ಪತ್ರದಲ್ಲಿ ತಿಳಿಸಲಾಗಿತ್ತು. ಇದಲ್ಲದೇ ಯುಜಿಸಿಯ ಯಾವ ಯೋಜನಾ ಅವಧಿಯಲ್ಲಿ ವಿ.ವಿ ನಿಲಯದಲ್ಲಿ ಉದ್ದೇಶಿಸಲಾಗಿರುವ ಪೀಠಗಳನ್ನು ಸ್ಥಾಪಿಸಲು ನಿರ್ಧರಿಸಿರುತ್ತದೆ ಎಂಬುದರ ಮಾಹಿತಿ ಲಭ್ಯವಿಲ್ಲವೆಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಇವರಿಂದ ಪತ್ರ ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಉಲ್ಲೇಖ (04)ರ ಪತ್ರದಲ್ಲಿ ತಿಳಿಸಿರುವಂತೆ, ಸದರಿ ಕರಡು ಪರಿನಿಯಮದ ಜೊತೆಗೆ ಸರ್ಕಾರಕ್ಕೆ ಸಲ್ಲಿಸಲಾಗಿದ್ದ, ಮೇಲಿನ ಇನ್ನೂ ಮೂರು ಪರಿನಿಯಮಗಳ ಪರಿಷ್ಕೃತ ಕರಡನ್ನು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ : ಪದ್ಮಭೂಷಣ ಡಾ. ಬಾಲಗಂಗಾಧರನಾಥ ಸ್ವಾಮಿಜಿ, ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಠ, ಪದ್ಮಭೂಷಣ ಡಾ. ಶಿವಕುಮಾರ ಸ್ವಾಮಿಜಿ, ಶ್ರೀ ಕ್ಷೇತ್ರ ಸಿದ್ಧಗಂಗಾ ಮಠ, ಶ್ರೀ. ಅನಂತಕುಮಾರ, ಮಾಜಿ ಮಂತ್ರಿಗಳು, ಕೇಂದ್ರ ಸರ್ಕಾರ ಹಾಗೂ His Holiness Jagadguru Dr. Shivarathri Rajendra Mahaswamiji Suttur Mutt, Mysuru ರ ಪರಿಷ್ಕೃತ ಕರಡು ಪರಿನಿಯಮಗಳನ್ನು ಸಭೆಯು ಅನುಮೋದಿಸಿತು. ಸದರಿ ಪರಿನಿಯಮಗಳನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆಯೊಂದಿಗೆ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರದ ಮೂಲಕ ಕಳುಹಿಸಿಕೊಡಲು ತೀರ್ಮಾನಿಸಲಾಯಿತು. ಸದರಿ ಪರಿನಿಯಮದಲ್ಲಿ ಹಣಕಾಸಿಗೆ ಸಂಬಂಧಪಟ್ಟಂತೆ ಯಾವ ಬದಲಾವಣೆ ಮಾಡಿಲ್ಲದ ಕಾರಣ ಹಣಕಾಸು ಸಮಿತಿಯ ಅನುಮೋದನೆಯ ಅಗತ್ಯವಿಲ್ಲವೆಂದು ತೀರ್ಮಾನಿಸಲಾಯಿತು. ಸದರಿ ಪೀಠಗಳನ್ನು ಬಾಹ್ಯ ಸಂಸ್ಥೆಗಳ ಹಣಕಾಸಿನ ನೆರವಿನಿಂದ ಸ್ಥಾಪಿಸಲು ಉದ್ದೇಶಿಸಿದ್ದು, ಯುಜಿಸಿ ಧನ ಸಹಾಯದ ಪ್ರಸ್ತಾಪವಿಲ್ಲದ ಕಾರಣ ಯುಜಿಸಿ ಯೋಜನ ಅವಧಿಯ ಪ್ರಸ್ತಾಪ ಅನ್ವಯಿಸುವುದಿಲ್ಲವೆಂದು ತೀರ್ಮಾನಿಸಲಾಯಿತು. ಯುಜಿಸಿಯು ಇಂತಹ ಪೀಠಗಳನ್ನು ಸ್ಥಾಪಿಸಲು ವಿವಿಗಳನ್ನು ಉತ್ತೇಜಿಸುತ್ತಿದ್ದು, ಯಾವ ಮಹನೀಯರ ಹೆಸರಿನಲ್ಲಿ ಸ್ಥಾಪಿಸಬಹುದು ಎಂಬ Indicative List ಮಾತ್ರ ನೀಡಿರುತ್ತದೆ ಎಂಬುದನ್ನು ಸಭೆಯು ಗಮನಿಸಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.13

**ವಿಷಯ :** ಕರಾಮುವಿಯ Grievance Redress Policy ಯನ್ನು ಅನುಮೋದಿಸುವ ಬಗ್ಗೆ.

UGC – ODL Regulation – 2020 ರನ್ವಯ ಪುಟ ಸಂಖ್ಯೆ: 107ರ Annexure – 10 ರಲ್ಲಿ Grievance Redress Mechanism ಬಗ್ಗೆ ಪ್ರಸ್ತಾಪಿಸಿದ್ದು, ಅದರನ್ವಯ ವಿಶ್ವವಿದ್ಯಾನಿಲಯದಲ್ಲಿ Grievance Redress System ಗೆ ಸಂಬಂಧಪಟ್ಟಂತೆ ಒಂದು Policy ಯನ್ನು ಹೊಂದುವುದು ಅವಶ್ಯವಿರುವ ಹಿನ್ನೆಲೆಯಲ್ಲಿ, Grievance Redress System ನ Policy ಯನ್ನು ಸಿದ್ಧಪಡಿಸಲಾಗಿದ್ದು, ಶೈಕ್ಷಣಿಕ ಮಂಡಳಿಯ ಅವಗಾಹನೆಗೆ ತರುತ್ತಾ, ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

ತೀರ್ಮಾನ : **Grievance Redress System ಗೆ ಸಂಬಂಧಿಸಿದ Policy ಯನ್ನು ಒಪ್ಪಲಾಯಿತು. ವಿದ್ಯಾರ್ಥಿಗಳ ಕುಂದು ಕೊರತೆ ನಿರ್ವಹಣೆಯನ್ನು ವಿದ್ಯಾರ್ಥಿ ಕಲ್ಯಾಣ ಘಟಕದಲ್ಲಿ ನಿರ್ವಹಿಸಲು ತಿಳಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.14

ವಿಷಯ: ಕರಾಮುವಿಯ 2021–22ನೇ ಶೈಕ್ಷಣಿಕ ಸಾಲಿಗೆ ಪಿಹೆಚ್.ಡಿ. ಕಾರ್ಯಕ್ರಮಗಳಿಗೆ ಅಧಿಸೂಚನೆ ಹೊರಡಿಸಲಾಗಿದ್ದು, ಈ ಅಧಿಸೂಚನೆಯನ್ನು ರಾಜ್ಯದ ವಿವಿಧ ಪತ್ರಿಕೆ ಹಾಗೂ ಜಾಲತಾಣದಲ್ಲಿ ಪ್ರಕಟಿಸಲಾಗಿದ್ದು, ಸದರಿ ಕೋರ್ಸ್‌ನ ವಿವರಣಾ ಪುಸ್ತಕಗಳನ್ನು ಅನುಮೋದಿಸುವ ಬಗ್ಗೆ.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2021–22ನೇ ಶೈಕ್ಷಣಿಕ ಸಾಲಿಗೆ ವಿವಿಧ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಲ್ಲಿ ಖಾಲಿ ಇರುವ 51 ಪಿಹೆಚ್.ಡಿ. ಸೀಟುಗಳ ಮಾಹಿತಿಯನ್ನಾಧರಿಸಿ, ಕರಾಮುವಿ ಪಿಹೆಚ್.ಡಿ. ಅಧ್ಯಾದೇಶ 2012 (3ನೇ ತಿದ್ದುಪಡಿ 2021) ಪ್ರಕಾರ ಅಧಿಸೂಚನೆಯನ್ನು ಹೊರಡಿಸಲಾಗಿತ್ತು, ಸದರಿ ಅಧಿಸೂಚನೆಯನ್ನು ಜಾಹೀರಾತಿನ ಮೂಲಕ ದಿನಾಂಕ: 13–03–2022ರ ರಾಜ್ಯದ ವಿವಿಧ ಪತ್ರಿಕೆ ಹಾಗೂ ವಿವಿಯ ಜಾಲತಾಣದಲ್ಲಿ ಪ್ರಕಟಿಸಲಾಗಿದೆ. ಸದರಿ ಜಾಹೀರಾತಿನಲ್ಲಿ ಯಾವುದೇ ದಂಡ ಶುಲ್ಕವಿಲ್ಲದೇ ದಿನಾಂಕ: 11–04–2022 ರಿಂದ 09–04–2022ರವರೆಗೆ ದಂಡ ಶುಲ್ಕವಿಲ್ಲದೆ ಹಾಗೂ ರೂ.500/–ರ ದಂಡ ಶುಲ್ಕದೊಂದಿಗೆ ದಿನಾಂಕ: 20–04–2022ರಂದು ಕೊನೆಯ ದಿನಾಂಕವನ್ನು ನಿಗದಿಗೊಳಿಸಲಾಗಿರುತ್ತದೆ.

ಪಿಹೆಚ್.ಡಿ. ವಿವರಣಾ ಪುಸ್ತಕ (ಕನ್ನಡ ಮತ್ತು ಆಂಗ್ಲ ಮಾಧ್ಯಮ) ಗಳನ್ನು ಕರಾಮುವಿ ಪಿಹೆಚ್.ಡಿ. ಅಧ್ಯಾದೇಶ 2012 (3ನೇ ತಿದ್ದುಪಡಿ 2021) ಪ್ರಕಾರ ಸಿದ್ಧಪಡಿಸಿ ಸಲ್ಲಿಸಲಾಗಿದ್ದು, ಇವುಗಳನ್ನು ಈಗಾಗಲೇ ಪ್ರವೇಶಾತಿ ಪ್ರಕ್ರಿಯೆಗಾಗಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್(www.ksoumysuru.ac.in)ನಲ್ಲಿ ಪ್ರಕಟಿಸಲಾಗಿದೆ ಮತ್ತು ಪ್ರವೇಶಾತಿ ಪ್ರಕ್ರಿಯ ಚಾಲನೆಯಲ್ಲಿರುತ್ತದೆ.

ಸದರಿ ಅಧಿಸೂಚನೆ ಹಾಗೂ ವಿವರಣಾ ಪುಸ್ತಕಗಳನ್ನು 59ನೇ ಶೈಕ್ಷಣಿಕ ಮಂಡಳಿ ಸಭೆಯ ಅನುಸಮರ್ಥನೆಗಾಗಿ ಮಂಡಿಸಲಾಗಿದೆ.

ತೀರ್ಮಾನ : **2021–22ನೇ ಶೈಕ್ಷಣಿಕ ಸಾಲಿನ ಪಿಹೆಚ್.ಡಿ ಕಾರ್ಯಕ್ರಮಗಳ ಅಧಿಸೂಚನೆ ಹಾಗೂ ವಿವರಣಾ ಪುಸ್ತಕಗಳನ್ನು ಶೈಕ್ಷಣಿಕ ಮಂಡಳಿ ಸಭೆಯು ಅನುಸಮರ್ಥನೆಗೊಳಿಸಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.15

ವಿಷಯ: ಕರಾಮುವಿಯ 2021–22ನೇ ಶೈಕ್ಷಣಿಕ ಸಾಲಿಗೆ ಪಿಹೆಚ್.ಡಿ. ಕಾರ್ಯಕ್ರಮಗಳಿಗೆ ಅಧಿಸೂಚನೆ ಹೊರಡಿಸಲಾಗಿದ್ದು, ಸದರಿ ಅಧಿಸೂಚನೆಯನ್ವಯ ಸಂಬಂಧಪಟ್ಟ 14 ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಪಿಹೆಚ್.ಡಿ. ಸಿಇಟಿ ಸಿಲಬಸ್‌ಗಳನ್ನು ಅನುಮೋದಿಸುವ ಬಗ್ಗೆ.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2021–22ನೇ ಶೈಕ್ಷಣಿಕ ಸಾಲಿಗೆ 14 ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಲ್ಲಿ ಖಾಲಿ ಇರುವ 51 ಪಿಹೆಚ್.ಡಿ. ಸೀಟುಗಳ ಮಾಹಿತಿಯನ್ನಾಧರಿಸಿ, ಅಧಿಸೂಚನೆಯನ್ನು ಹೊರಡಿಸಲಾಗಿತ್ತು, ಸದರಿ ಅಧಿಸೂಚನೆಯನ್ವಯ 14 ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಿಂದ ಕರಾಮುವಿ ಪಿಹೆಚ್.ಡಿ. ಅಧ್ಯಾದೇಶ 2012 (3ನೇ ತಿದ್ದುಪಡಿ 2021) ಪ್ರಕಾರ ಪಿಹೆಚ್.ಡಿ. ಸಾಮಾನ್ಯ ಪ್ರವೇಶ ಪರೀಕ್ಷೆಯ ಸಿಲಬಸ್‌ಗಳನ್ನು ನೀಡುವಂತೆ ತಿಳಿಸಲಾಗಿದ್ದು, ಅದರಂತೆ ಕೆಳಕಂಡ ಅಧ್ಯಯನ ಮತ್ತು ಸಂಶೋಧನಾ ವಿಭಾಗವಾರು ಸಿಲಬಸ್‌ಗಳನ್ನು ಡೀನ್(ಶೈಕ್ಷಣಿಕ)ರವರ ವಿಭಾಗಕ್ಕೆ ಸಲ್ಲಿಸಲಾಗಿದ್ದು, ಸದರಿ ಸಿಲಬಸ್‌ಗಳನ್ನು ಈಗಾಗಲೇ ವಿಶ್ವವಿದ್ಯಾನಿಲಯದ ವೆಬ್‌ಸೈಟ್ (www.ksoumysuru.ac.in) ನಲ್ಲಿ ಪ್ರಕಟಿಸಲಾಗಿದೆ.

| **ಕ್ರಮ ಸಂಖ್ಯೆ** | **ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಹೆಸರು** | **Ph.D ಕಾರ್ಯಕ್ರಮದ CET ಸಿಲಬಸ್** |
|---|---|---|
| 1 | ಕನ್ನಡ | ಸಲ್ಲಿಸಿರುತ್ತಾರೆ |
| 2 | ಹಿಂದಿ | ಸಲ್ಲಿಸಿರುತ್ತಾರೆ |
| 3 | ತೆಲಗು | ಸಲ್ಲಿಸಿರುತ್ತಾರೆ |
| 4 | ಅರ್ಥಶಾಸ್ತ್ರ | ಸಲ್ಲಿಸಿರುತ್ತಾರೆ |
| 5 | ರಾಜ್ಯಶಾಸ್ತ್ರ | ಸಲ್ಲಿಸಿರುತ್ತಾರೆ |
| 6 | ಸಮಾಜಶಾಸ್ತ್ರ | ಸಲ್ಲಿಸಿರುತ್ತಾರೆ |
| 7 | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ | ಸಲ್ಲಿಸಿರುತ್ತಾರೆ |
| 8 | ವಾಣಿಜ್ಯಶಾಸ್ತ್ರ | ಸಲ್ಲಿಸಿರುತ್ತಾರೆ |
| 9 | ನಿರ್ವಹಣಾಶಾಸ್ತ್ರ | ಸಲ್ಲಿಸಿರುತ್ತಾರೆ |
| 10 | ಭೂಗೋಳಶಾಸ್ತ್ರ | ಸಲ್ಲಿಸಿರುತ್ತಾರೆ |
| 11 | ಜೀವ ರಸಾಯನಶಾಸ್ತ್ರ | ಸಲ್ಲಿಸಿರುತ್ತಾರೆ |
| 12 | ರಸಾಯನಶಾಸ್ತ್ರ | ಸಲ್ಲಿಸಿರುತ್ತಾರೆ |
| 13 | ಮಾಹಿತಿ ತಂತ್ರಜ್ಞಾನ | ಸಲ್ಲಿಸಿರುತ್ತಾರೆ |
| 14 | ಸೂಕ್ಷ್ಮ ಜೀವಶಾಸ್ತ್ರ | ಸಲ್ಲಿಸಿರುತ್ತಾರೆ |

ಕರಾಮುವಿಯ 14 ಅಧ್ಯಯನ ಮತ್ತು ಸಂಶೋಧನಾ ವಿಭಾಗವಾರು ಅಧ್ಯಕ್ಷರು ಸಲ್ಲಿಸಿರುವ ಪಿಹೆಚ್.ಡಿ. ಸಾಮಾನ್ಯ ಪ್ರವೇಶ ಪರೀಕ್ಷೆಯ ಸಿಲಬಸ್‌ಗಳನ್ನು 59ನೇ ಶೈಕ್ಷಣಿಕ ಮಂಡಳಿ ಸಭೆಯ ಅನುಮೋದನೆಗೆ ಮಂಡಿಸಲಾಗಿದೆ.

**ತೀರ್ಮಾನ : ಮೇಲ್ಕಂಡ ವಿಭಾಗಗಳ ಪಿಹೆಚ್.ಡಿ ಸಿಇಟಿ ಪಠ್ಯಕ್ರಮಗಳನ್ನು ಅನುಮೋದಿಸಲಾಯಿತು. ಪಿಹೆಚ್.ಡಿ ಪ್ರಶ್ನೆ ಪತ್ರಿಕೆಗಳನ್ನು ಹೊರಗಿನಿಂದ ಸಿದ್ಧಪಡಿಸಿ ಆಧ್ಯತೆ ಮೇರೆಗೆ ಪಿಹೆಚ್.ಡಿ ಪ್ರವೇಶ ಪರೀಕ್ಷೆಯನ್ನು ನಡೆಸಲು ಸಭೆಯು ಅನುಮೋದಿಸಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.16

**ವಿಷಯ:** ಕರಾಮುವಿಯ 2018–19ನೇ ಶೈಕ್ಷಣಿಕ ಸಾಲಿನ ಕರಾಮುವಿ ಪಿಹೆಚ್.ಡಿ. ಕೋರ್ಸ್‌ವರ್ಕ್‌ನ Course-III Area of Specialization(s) ಪತ್ರಿಕೆಯ ಮೌಲ್ಯಮಾಪನಕ್ಕೆ ಸಂಬಂಧಪಟ್ಟ ಬಗ್ಗೆ.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2018–19ನೇ ಶೈಕ್ಷಣಿಕ ಸಾಲಿಗೆ ಕರಾಮುವಿ ಪಿಹೆಚ್.ಡಿ. ಅಧ್ಯಾದೇಶ 2012 (3ನೇ ತಿದ್ದುಪಡಿ 2021) ಪ್ರಕಾರ ಪಿಹೆಚ್.ಡಿ. ಕಾರ್ಯಕ್ರಮಗಳಿಗೆ ತಾತ್ಕಾಲಿಕವಾಗಿ ಪ್ರವೇಶಾತಿ ಪಡೆದಿರುವ ಸಂಶೋಧನಾರ್ಥಿಗಳ ಕೋರ್ಸ್‌ವರ್ಕ್ ತರಗತಿಗಳನ್ನು ನಡೆಸಲಾಗಿದ್ದು, ಸದರಿ ಕೋರ್ಸ್‌ವರ್ಕ್‌ನ ಪರೀಕ್ಷೆಯನ್ನು ಪರೀಕ್ಷಾ ವಿಭಾಗದಿಂದ ನಡೆಸಲಾಗಿರುತ್ತದೆ.

ಪಿಹೆಚ್.ಡಿ. ಕೋರ್ಸ್‌ವರ್ಕ್‌ನಲ್ಲಿ ಒಟ್ಟು ಮೂರು ಪತ್ರಿಕೆಗಳಿದ್ದು, ಸದರಿ ಪತ್ರಿಕೆಗಳಲ್ಲಿ ವಿಷಯ–3ರ ಪತ್ರಿಕೆಯ ಮೌಲ್ಯಮಾಪನವನ್ನು ಕರಾಮುವಿ ಪಿಹೆಚ್.ಡಿ. ಅಧ್ಯಾದೇಶ 2012(3ನೇ ತಿದ್ದುಪಡಿ 2021) ಅನುಚ್ಛೇದ 18.4ರಲ್ಲಿ The course-III Area of Specialization(s) paper shall be evaluated by external examiner and respective Research Supervisor. ಎಂದು ನಮೂದಾಗಿರುವುದರಿಂದ, ರಾಜ್ಯಶಾಸ್ತ್ರ ಅಧ್ಯಯನ ಸಂಶೋಧನಾ ವಿಭಾಗದ ನಿವೃತ್ತ ಪ್ರಾಧ್ಯಾಪಕರುಗಳಾದ ಪ್ರೊ. ಟಿ.ಡಿ.ದೇವೇಗೌಡ ರವರು ತಮ್ಮ ವಿದ್ಯಾರ್ಥಿಯಾದ ಶ್ರೀ.ರವಿಕುಮಾರ್ ಎಂಬ ಸಂಶೋಧನಾರ್ಥಿಯ ಕೋರ್ಸ್‌ವರ್ಕ್‌ನ 3ನೇ ಪತ್ರಿಕೆಯನ್ನು ಮೌಲ್ಯಮಾಪನ ಮಾಡಲು ನನ್ನ ವಯೋಮಾನ ಮತ್ತು ಕೆಲಸದ ಒತ್ತಡವಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಬಂದು ಮೌಲ್ಯಮಾಪನ ಮಾಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ವಿಭಾಗದ ಪ್ರಾಧ್ಯಾಪಕರಿಂದಲೇ ಮೌಲ್ಯಮಾಪನ ಮಾಡಿಸಿ ವಿದ್ಯಾರ್ಥಿಗೆ ಅನುಕೂಲ ಮಾಡಿಕೊಡಬೇಕೆಂದು ಪತ್ರದಲ್ಲಿ ತಿಳಿಸಿರುತ್ತಾರೆ.

ಅನಂತರ, ಸದರಿ ವಿಭಾಗದ ಮತ್ತೊಬ್ಬರು ನಿವೃತ್ತ ಪ್ರಾಧ್ಯಾಪಕರುಗಳಾದ ಪ್ರೊ.ಕೆ.ಜೆ. ಸುರೇಶ್ ರವರ ಮೂರು ವಿದ್ಯಾರ್ಥಿಗಳಾದ ಶ್ರೀಮತಿ. ವನಜಾ, ಶ್ರೀ. ಎಂ.ಕೆ.ಲೋಕೇಶ್ ಮತ್ತು ಶ್ರೀ. ಡಿ.ಎಂ.ಪ್ರಕಾಶ್ ಎಂಬ ಸಂಶೋಧನಾರ್ಥಿಗಳನ್ನು ಕೋರ್ಸ್‌ವರ್ಕ್‌ನ 3ನೇ ಪತ್ರಿಕೆಯನ್ನು ಮೌಲ್ಯಮಾಪನ ಮಾಡುವ ಕಾರ್ಯಕ್ಕೆ ಅನಾರೋಗ್ಯದ ಕಾರಣ ಹಾಜರಾಗಲು ಸಾಧ್ಯವಾಗದ ಕಾರಣ ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರುಗಳಿಂದಲೇ ಮೌಲ್ಯಮಾಪನ ಮಾಡಿಸಿ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ಕೋರುತ್ತೇನೆಂದು ಪತ್ರದಲ್ಲಿ ತಿಳಿಸಿರುತ್ತಾರೆ.

ಈ ಪತ್ರಗಳ ಅನ್ವಯ ನಾಲ್ಕು ಸಂಶೋಧನಾರ್ಥಿಗಳ ಹಿತದೃಷ್ಟಿಯಿಂದ ಸದರಿ ಕೋರ್ಸ್‌ವರ್ಕ್ 3ನೇ ಪತ್ರಿಕೆಯ ಮೌಲ್ಯಮಾಪನವನ್ನು ಸಂಬಂಧಪಟ್ಟ ವಿಭಾಗದ ಪಿಹೆಚ್.ಡಿ. ಪರೀಕ್ಷಾ ಮಂಡಳಿ ಅಧ್ಯಕ್ಷರಿಂದ ಮೌಲ್ಯಮಾಪನ ಮಾಡಿಸಲು ಈಗಾಗಲೇ ಕ್ರಮವಹಿಸಲಾಗಿದ್ದು, ಸದರಿ ವಿಷಯವನ್ನು 59ನೇ ಶೈಕ್ಷಣಿಕ ಮಂಡಳಿ ಸಭೆಯ ಅನುಸಮರ್ಥನೆಗಾಗಿ ಮಂಡಿಸಲಾಗಿದೆ.

ಮುಂದುವರೆದು, ಪಿಹೆಚ್.ಡಿ. ಮಾರ್ಗದರ್ಶಕರುಗಳಿಂದ ಮೌಲ್ಯಮಾಪನ ಮಾಡಿಸಲು ಸಾಧ್ಯವಾಗದ ಪಕ್ಷದಲ್ಲಿ ಆಯಾ ವಿಭಾಗದ Ph.D. BOE Chairman ಮಾಡಬಹುದು ಎಂದು ಮಾರ್ಗಸೂಚಿಯನ್ನು ಸಿದ್ಧಪಡಿಸಿ ಅನುಮೋದನೆಗಾಗಿ ಮಂಡಿಸಿದೆ.

<u>ತೀರ್ಮಾನ</u> : **ಸಂಶೋಧನಾರ್ಥಿಗಳ ಹಿತದೃಷ್ಟಿಯಿಂದ ಕೋರ್ಸ್‌ವರ್ಕ್‌ನ 3ನೇ ಪತ್ರಿಕೆಯ ಮೌಲ್ಯಮಾಪನವನ್ನು ರಾಜ್ಯಶಾಸ್ತ್ರ ವಿಭಾಗದ ಪಿಹೆಚ್.ಡಿ. ಪರೀಕ್ಷಾ ಮಂಡಳಿ ಅಧ್ಯಕ್ಷರಿಂದ ಮೌಲ್ಯಮಾಪನ ಮಾಡಿಸಿರುವುದನ್ನು ಸಭೆಯು ಅನುಸಮರ್ಥನೆಗೊಳಿಸಲಾಯಿತು. ಕರಾಮುವಿ ಪಿಹೆಚ್‌ಡಿ ಆಧ್ಯಾದೇಶ 2012 (3 ನೇ ತಿದ್ದುಪಡಿ 2021) ರ ಅನುಚ್ಛೇದ 18.4 ಗೆ ಸಂಬಂಧಿಸಿದಂತೆ ಸಿದ್ಧಪಡಿಸಿರುವ ಮಾರ್ಗಸೂಚಿಯನ್ನು ಅಳವಡಿಸಿಕೊಳ್ಳಲು ಒಪ್ಪಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.17

**ವಿಷಯ:** Policy Document on Exam Automation ಗೆ ಅನುಮೋದನೆ ಕೋರುವ ಬಗ್ಗೆ.

*****

ವಿಶ್ವವಿದ್ಯಾನಿಲಯಕ್ಕೆ NAAC ಮಾನ್ಯತೆಯನ್ನು ಪಡೆಯುವ ಸಂಬಂಧ NAAC Manualನ Criteria-2 ರಲ್ಲಿನ 2.5.4 Status of Automation of Examination/Evaluation processes ನಲ್ಲಿ ತಿಳಿಸಿರುವಂತೆ ವಿದ್ಯಾರ್ಥಿಯು ಪರೀಕ್ಷೆಯನ್ನು ಬರೆಯುವಲ್ಲಿ ವಿಶ್ವವಿದ್ಯಾನಿಲಯವು ಹಂತ ಹಂತವಾಗಿ automation ಮೂಲಕ ನಿರ್ವಹಿಸಬೇಕಾದ/ನಿರ್ವಹಿಸುತ್ತಿರುವ ಸಂಪೂರ್ಣ ಕಾರ್ಯಚರಣೆಯನ್ನು, ವಿವರವನ್ನು ಸಿದ್ದಪಡಿಸಲು ಅಗತ್ಯವಿರುವ Exam Automation ಕುರಿತಾದ Document ಅನ್ನು ಹೊಂದುವುದು ಅವಶ್ಯವಾಗಿರುತ್ತದೆ. NAAC ಮಾನ್ಯತೆಯನ್ನು ಪಡೆಯಲು ಸದರಿ Policy Documentಗಾಗಿ 10 weightage points ಗಳನ್ನು ನಿಗದಿಪಡಿಸಲಾಗಿರುತ್ತದೆ.

ಈ ಸಂಬಂಧ ವಿಶ್ವವಿದ್ಯಾನಿಲಯದ Policy Documents on Exam Automation ಅನ್ನು ಸಿದ್ದಪಡಿಸಲು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ತಜ್ಞರ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ದಿನಾಂಕ: 10.02.2022 ಹಾಗೂ 17.05.2022 ರಂದು ಸಭೆ ಸೇರಿ Policy Document on Exam Automation ನ ಕರಡನ್ನು ಸಿದ್ದಪಡಿಸಲಾಗಿರುತ್ತದೆ.

Policy Document on Exam Automation ಅನ್ನು ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆ ಕೋರಿ ವಿಷಯ ಮಂಡಿಸಿದೆ.

<u>ತೀರ್ಮಾನ</u> : **Policy Document on Exam Automation ಅನ್ನು ಶೈಕ್ಷಣಿಕ ಮಂಡಳಿ ಸಭೆಯು ಅನುಮೋದಿಸಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.18

**ವಿಷಯ:** Policy Document on Employee Welfare Measures ಗೆ ಅನುಮೋದನೆ ಕೋರುವ ಬಗ್ಗೆ.

*****

ವಿಶ್ವವಿದ್ಯಾನಿಲಯಕ್ಕೆ NAAC ಮಾನ್ಯತೆಯನ್ನು ಪಡೆಯುವ ಸಂಬಂಧ NAAC Manualನ Criteria-6 ರಲ್ಲಿನ ನ 6.3.1 Welfare Measures for Teachers, other Academics and Non-Academic staff ನಲ್ಲಿ ತಿಳಿಸಿರುವಂತೆ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕ ಮತ್ತು ಅಧ್ಯಾಪಕೇತರ ನೌಕರರ ಕಲ್ಯಾಣಕ್ಕಾಗಿ ಕೈಗೊಳ್ಳಬೇಕಾದ ಕ್ರಮಗಳ ಸಂಬಂಧ Employee Welfare Measures ಕುರಿತಾದ Document ಅನ್ನು ಹೊಂದುವುದು ಅವಶ್ಯವಾಗಿರುತ್ತದೆ. NAAC ಮಾನ್ಯತೆಯನ್ನು ಪಡೆಯಲು ಸದರಿ Policy Document ಗಾಗಿ 05 weightage points ಗಳನ್ನು ನಿಗದಿಪಡಿಸಲಾಗಿರುತ್ತದೆ.

ಈ ಸಂಬಂಧ ವಿಶ್ವವಿದ್ಯಾನಿಲಯದ Policy Documents on Employee Welfare Measures ಅನ್ನು ಸಿದ್ದಪಡಿಸಲು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ತಜ್ಞರ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ದಿನಾಂಕ: 11.05.2022 ರಂದು ಸಭೆ ಸೇರಿ Policy Document on Employee Welfare Measure ನ ಕರಡನ್ನು ಸಿದ್ದಪಡಿಸಲಾಗಿರುತ್ತದೆ.

Policy Document on Employee Welfare Measures ಅನ್ನು ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆ ಕೋರಿ ವಿಷಯ ಮಂಡಿಸಿದೆ.

<u>ತೀರ್ಮಾನ</u> : Policy Document on Employee Welfare Measures **ಅನ್ನು ಅನುಮೋದಿಸಲಾಯಿತು. ಅದರ ಅನ್ವಯ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ಶೈಕ್ಷಣಿಕ ಸಭೆಯು ತೀರ್ಮಾನಿಸಿತು.**

1. **ವಿವಿ ನಿಲಯದಲ್ಲಿ ಶಿಶುಪಾಲನಾ ಕೇಂದ್ರವನ್ನು ಹಾಗೂ ಮಹಿಳಾ ವಿಶ್ರಾಂತಿ ಗೃಹವನ್ನು ಸ್ಥಾಪಿಸಲು ತೀರ್ಮಾನಿಸಲಾಯಿತು. ಈ ಬಗ್ಗೆ ಕ್ರಮ ಕೈಗೊಳ್ಳಲು ವಿವಿಯ ಅಭಿಯಂತರರಿಗೆ ಸೂಚಿಸಲು ಒಪ್ಪಿಗೆ ನೀಡಲಾಯಿತು.**
2. **ಉದ್ಯೋಗಿಗಳ ಕಲ್ಯಾಣಕ್ಕಾಗಿ ಆಂತರಿಕ ದೂರು ಘಟಕವನ್ನು ಸ್ಥಾಪಿಸಲು ಒಪ್ಪಿಗೆ ನೀಡಲಾಯಿತು.**
3. **ವಿವಿಯ ಸಿಬ್ಬಂದಿಗಳಿಗೆ, ಅವರ ಪತಿ/ಪತ್ನಿ ಮತ್ತು ಇಬ್ಬರು ಮಕ್ಕಳಿಗೆ ಪ್ರವೇಶಾತಿ ಶುಲ್ಕದಲ್ಲಿ ಶೇ. 25% ರಷ್ಟು ರಿಯಾಯಿತಿ ನೀಡಿರುವುದನ್ನು ಅನುಸಮರ್ಥನೆಗೊಳಿಸಲಾಯಿತು.**
4. **ವಿವಿಯ ಎಲ್ಲಾ ಭೋದಕೇತರ ಸಿಬ್ಬಂದಿಗಳಿಗೆ ಉಚಿತವಾಗಿ ಲೈಬ್ರರಿ ಕಾರ್ಡ್‌ಗಳನ್ನು ನೀಡಲು ತೀರ್ಮಾನಿಸಲಾಯಿತು.**
5. **ಸ್ವಚ್ಚತಾ ಸಿಬ್ಬಂದಿಗಳಿಗೆ ಸುರಕ್ಷ ಪರಿಕರಗಳನ್ನು ನೀಡಲು ತೀರ್ಮಾನಿಸಲಾಯಿತು.**
6. **ಕಚೇರಿ ವೇಳೆಯಲ್ಲಿ ಆರೋಗ್ಯ ಕೇಂದ್ರವು ತೆರೆದಿರುವಂತೆ ಕ್ರಮವಹಿಸಲು ತೀರ್ಮಾನಿಸಲಾಯಿತು.**
7. **ವಿವಿ ಸಿಬ್ಬಂದಿಗಳಿಗೆ ಕಾಲಕಾಲಕ್ಕೆ ಆರೋಗ್ಯ ತಪಾಸಣೆ ನಡೆಸಲು ತೀರ್ಮಾನಿಸಲಾಯಿತು.**
8. **ವಿವಿ ಸಿಬ್ಬಂದಿಗಳಿಗೆ ಯೋಗ, ಆಯ್ದ ಕ್ರೀಡೆಗಳು ಮತ್ತು ಜಿಮ್ ಸೌಕರ್ಯಗಳನ್ನು ಸ್ಥಾಪಿಸಲು ತೀರ್ಮಾನಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.19

**ವಿಷಯ:** Policy Document on Evaluation Methodology ಗೆ ಅನುಮೋದನೆ ಕೋರುವ ಬಗ್ಗೆ.

*****

ವಿಶ್ವವಿದ್ಯಾನಿಲಯಕ್ಕೆ NAAC ಮಾನ್ಯತೆಯನ್ನು ಪಡೆಯುವ ಸಂಬಂಧ NAAC Manual ನ Criteria-2 ರಲ್ಲಿನ ನ 2.5.3 Formative Assessment ನಲ್ಲಿ ತಿಳಿಸಿರುವಂತೆ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟವನ್ನು ಪರಿಶೀಲಿಸುವ ಸಂಬಂಧ Evaluation Methodology ಕುರಿತಾದ Document ಅನ್ನು ಹೊಂದುವುದು ಅವಶ್ಯವಾಗಿರುತ್ತದೆ. NAAC ಮಾನ್ಯತೆಯನ್ನು ಪಡೆಯಲು ಸದರಿ Policy Document ಗಾಗಿ 10 weightage points ಗಳನ್ನು ನಿಗದಿಪಡಿಸಲಾಗಿರುತ್ತದೆ.

ಈ ಸಂಬಂಧ ವಿಶ್ವವಿದ್ಯಾನಿಲಯದ Policy Documents on Evaluation Methodology ಅನ್ನು ಸಿದ್ದಪಡಿಸಲು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ತಜ್ಞರ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ದಿನಾಂಕ: **31.01.2022** ರಂದು ಸಭೆ ಸೇರಿ Policy Document on Evaluation Methodology ನ ಕರಡನ್ನು ಸಿದ್ದಪಡಿಸಲಾಗಿರುತ್ತದೆ.

Policy Document on Evaluation Methodology ಅನ್ನು ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆ ಕೋರಿ ವಿಷಯ ಮಂಡಿಸಿದೆ.

**ತೀರ್ಮಾನ : Policy Document on Evaluation Methodology ಅನ್ನು ಶೈಕ್ಷಣಿಕ ಮಂಡಳಿ ಸಭೆಯು ಅನುಮೋದಿಸಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.20

**ವಿಷಯ:** Policy Document on Gender Equity and Sensitivity ಗೆ ಅನುಮೋದನೆ ಕೋರುವ ಬಗ್ಗೆ.

*****

ವಿಶ್ವವಿದ್ಯಾನಿಲಯಕ್ಕೆ NAAC ಮಾನ್ಯತೆಯನ್ನು ಪಡೆಯುವ ಸಂಬಂಧ NAAC Manual ನ Criteria-7ರಲ್ಲಿನ 7.1.2 Gender Equity and Sensitivity at work place ನಲ್ಲಿ ತಿಳಿಸಿರುವಂತೆ ವಿಶ್ವವಿದ್ಯಾನಿಲಯದ ಮಹಿಳಾ ಉದ್ಯೋಗಿಗಳ ಹಾಗೂ ವಿದ್ಯಾರ್ಥಿನಿಯರ ಹಿತ ರಕ್ಷಣೆ ಮತ್ತು ಸಮಾನ ಅವಕಾಶವನ್ನು ಕಾಪಾಡುವ ಸಂಬಂಧ Gender Equity and Sensitivity ಕುರಿತಾದ Documentಅನ್ನು ಹೊಂದುವುದು ಅವಶ್ಯವಾಗಿರುತ್ತದೆ. NAAC ಮಾನ್ಯತೆಯನ್ನು ಪಡೆಯಲು ಸದರಿ Policy Documentಗಾಗಿ 05 weightage points ಗಳನ್ನು ನಿಗದಿಪಡಿಸಲಾಗಿರುತ್ತದೆ.

ಈ ಸಂಬಂಧ ವಿಶ್ವವಿದ್ಯಾನಿಲಯದ Policy Documents on Gender Equity and Sensitivity ಅನ್ನು ಸಿದ್ದಪಡಿಸಲು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ತಜ್ಞರ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ದಿನಾಂಕ: 17.05.2022 ರಂದು ಸಭೆ ಸೇರಿ Policy Document on Gender Sensitivity ನ ಕರಡನ್ನು ಸಿದ್ದಪಡಿಸಲಾಗಿರುತ್ತದೆ.

Policy Document on Gender Equity and Sensitivity ಅನ್ನು ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆ ಕೋರಿ ವಿಷಯ ಮಂಡಿಸಿದೆ.

<u>ತೀರ್ಮಾನ</u> : **Policy Document on Gender Equity and Sensitivity ಅನ್ನು ಶೈಕ್ಷಣಿಕ ಮಂಡಳಿ ಸಭೆಯು ಅನುಮೋದಿಸಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.21

**ವಿಷಯ:** Policy Document on Quality and Strategic Plan ಗೆ ಅನುಮೋದನೆ ಕೋರುವ ಬಗ್ಗೆ.

*****

ವಿಶ್ವವಿದ್ಯಾನಿಲಯಕ್ಕೆ NAAC ಮಾನ್ಯತೆಯನ್ನು ಪಡೆಯುವ ಸಂಬಂಧ NAAC Manualನ Criteria-2 ಮತ್ತು Criteria-6 ರಲ್ಲಿನ 2.4 Teachers and other Academics – Profile and Quality ಮತ್ತು 6.5 Internal Quality assurance System ನಲ್ಲಿ ತಿಳಿಸಿರುವಂತೆ ವಿಶ್ವವಿದ್ಯಾನಿಲಯದ ಗುಣಮಟ್ಟ ಹಾಗೂ ಕಾರ್ಯತಂತ್ರದ ಯೋಜನೆಯ ಕುರಿತಾದ ವರದಿಯನ್ನು ಸಿದ್ದಪಡಿಸುವ ಸಂಬಂಧ Quality and Strategic plan ಕುರಿತಾದ documentಅನ್ನು ಹೊಂದುವುದು ಅವಶ್ಯವಾಗಿರುತ್ತದೆ. NAAC ಮಾನ್ಯತೆಯನ್ನು ಪಡೆಯಲು ಸದರಿ Policy Documentಗಾಗಿ ಒಟ್ಟು 10 weightage points ಗಳನ್ನು ನಿಗದಿಪಡಿಸಲಾಗಿರುತ್ತದೆ.

ಈ ಸಂಬಂಧ ವಿಶ್ವವಿದ್ಯಾನಿಲಯದ Policy Documents on Quality and Strategic Plan ಅನ್ನು ಸಿದ್ದಪಡಿಸಲು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ತಜ್ಞರ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ದಿನಾಂಕ:09.05.2022 ಹಾಗೂ 13.05.2022 ರಂದು ಸಭೆ ಸೇರಿ Policy Document on Quality and Strategic Plan ನ ಕರಡನ್ನು ಸಿದ್ದಪಡಿಸಲಾಗಿರುತ್ತದೆ.

Policy Document on Quality and Strategic Plan ಅನ್ನು ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆ ಕೋರಿ ವಿಷಯ ಮಂಡಿಸಿದೆ.

ತೀರ್ಮಾನ : **Policy Document on Quality and Strategic Plan ಅನ್ನು ಶೈಕ್ಷಣಿಕ ಮಂಡಳಿ ಸಭೆಯು ಅನುಮೋದಿಸಿತು.**

**ಕುಲಸಚಿವರು** **ಕುಲಪತಿಗಳ**

**ವಿಷಯ ಸಂಖ್ಯೆ: 59.22**

**ವಿಷಯ:** Policy Document on Promotion of Research ಗೆ ಅನುಮೋದನೆ ಕೋರುವ ಬಗ್ಗೆ.

*****

ವಿಶ್ವವಿದ್ಯಾನಿಲಯಕ್ಕೆ NAAC ಮಾನ್ಯತೆಯನ್ನು ಪಡೆಯುವ ನಿಟ್ಟಿನಲ್ಲಿ NAAC Manual ನ Criteria-3 ರಲ್ಲಿನ 3.1.1 Policy for Promotion of Research ನಲ್ಲಿ ತಿಳಿಸಿರುವಂತೆ, ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆಗಳನ್ನು ಕೈಗೊಳ್ಳುವ ಸಂದರ್ಭಗಳಲ್ಲಿ ವ್ಯವಸ್ಥಿತ ಮತ್ತು ಶಿಸ್ತು ಆಧಾರಿತ ಸಂಶೋಧನೆಗಳನ್ನು ಉತ್ತೇಜಿಸಲು ಸಾಧ್ಯವಾಗುವಂತೆ, ವಿಶ್ವವಿದ್ಯಾನಿಲಯವು Promotion of Research ಕುರಿತಾದ Policy Document ಅನ್ನು ಹೊಂದುವುದು ಅವಶ್ಯವಾಗಿರುತ್ತದೆ. NAAC ಮಾನ್ಯತೆಯನ್ನು ಪಡೆಯಲು ಸದರಿ Policy Document ಗಾಗಿ 10 weightage points ಗಳನ್ನು ನಿಗದಿಪಡಿಸಲಾಗಿರುತ್ತದೆ

ಈ ಸಂಬಂಧ ವಿಶ್ವವಿದ್ಯಾನಿಲಯದ Policy Documents on Promotion of Research ಅನ್ನು ಸಿದ್ಧಪಡಿಸಲು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ತಜ್ಞರ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ದಿನಾಂಕ: 09.02.2022 ಹಾಗೂ 13.05.2022 ರಂದು ಸಭೆ ಸೇರಿ Policy Document on Promotion of Research ನ ಕರಡನ್ನು ಸಿದ್ಧಪಡಿಸಲಾಗಿರುತ್ತದೆ.

Policy Document on Promotion of Research ಅನ್ನು ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆ ಕೋರಿ ವಿಷಯ ಮಂಡಿಸಿದೆ.

<u>ತೀರ್ಮಾನ</u> **: Policy Document on Promotion of Research ಅನ್ನು ಶೈಕ್ಷಣಿಕ ಮಂಡಳಿ ಸಭೆಯು ಅನುಮೋದಿಸಿತು. ಅದರ ಅನ್ವಯ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ತೀರ್ಮಾನಿಸಿತು.**

1. **ದೇಶಿಯವಾಗಿ ಪ್ರತಿ ವರ್ಷ ಯಾವುದಾದರೂ ಎರಡು ಸಮ್ಮೇಳನ/ಕಾರ್ಯಗಾರ/ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಪ್ರಯಾಣ ಭತ್ಯೆ, ದಿನ ಭತ್ಯೆ ಹಾಗೂ ನೊಂದಣಿ ಶುಲ್ಕವನ್ನು ವಿವಿಯ ವತಿಯಿಂದ ಭರಿಸುವುದು.**
2. **ಭೋದಕರ ಸೇವಾ ಅವಧಿಯಲ್ಲಿ ಯಾವುದಾದರೂ ಎರಡು, ವಿದೇಶದಲ್ಲಿ ನಡೆಯುವ, ಸಮ್ಮೇಳನ/ಕಾರ್ಯಗಾರ/ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಪ್ರಯಾಣ ಭತ್ಯೆ, ದಿನ ಭತ್ಯೆ ಹಾಗೂ ನೊಂದಣಿ ಶುಲ್ಕವನ್ನು ವಿವಿಯ ವತಿಯಿಂದ ಭರಿಸುವುದು.**
3. **ಪ್ರತಿ ವರ್ಷ ಪ್ರತಿ ಭೋದಕರು ಇಂತಹ ಯಾವುದಾದರೊಂದು ಕಾರ್ಯಕ್ರಮದಲ್ಲಿ ಭಾಗವಹಿಸುವುದನ್ನು ಕಡ್ಡಾಯ ಮಾಡುವುದು.**
4. **ಯಾವುದಾದರೂ ಎರಡು ವೃತ್ತಿಪರ ಸಂಸ್ಥೆಯಲ್ಲಿ ಸದಸ್ಯತ್ವ ಪಡೆಯುವುದಕ್ಕೆ ಸದಸ್ಯತ್ವ ಶುಲ್ಕವನ್ನು ವಿವಿಯ ವತಿಯಿಂದ ಭರಿಸುವುದು. (ಒಂದು ಬಾರಿಗೆ)**
5. **ಕರಾಮುವಿ ಸಂಶೋಧನಾ ಪಬ್ಲಿಕೇಷನ್ ಕಮಿಟಿಯಲ್ಲಿ ಅನುಮೋದನೆಯಾಗುವ ಸಂಶೋಧನಾ ಲೇಖನಗಳನ್ನು, ಸದರಿ ಸಮಿತಿಯು ಸೂಚಿಸುವ ಪ್ರತಿಷ್ಠಿತ/ಯುಜಿಸಿ ಅನುಮೋದಿತ ರಾಷ್ಟ್ರೀಯ/ ಅಂತರಾಷ್ಟ್ರೀಯ ನಿಯತಕಾಲಿಕೆಗಳನ್ನು ಪ್ರಕಟಿಸಲು ಪ್ರಕಟನಾ ಶುಲ್ಕವನ್ನು ವಿವಿಯ ವತಿಯಿಂದ ಭರಿಸುವುದು.**
6. **ವಿವಿಯ ಪ್ರಸಾರಂಗದ ಮೂಲಕ ನಿಯತಕಾಲಿಕೆಯನ್ನು ಪ್ರಕಟಿಸುವುದು.**
7. **ಸೆಂಟರ್ ಫಾರ್ ಇನೋವೇಶನ್ ಅನ್ನು ಸಂಶೋಧನಾ ಮತ್ತು ಅಭಿವೃದ್ಧಿ ಘಟಕದ ವತಿಯಿಂದ ಆರಂಭಿಸುವುದು.**
8. **ಕರಾಮುವಿಯ ಭೋದಕ ಮತ್ತು ಭೋದಕೇತರ ಸಿಬ್ಬಂದಿಗಳು ಸಮಾಜಮುಖಿ ಕಾರ್ಯನ್ಮೋಖರಾಗಲು ಪ್ರೇರೆಪಿಸುವುದು ಮತ್ತು ಇವುಗಳನ್ನು ದಾಖಲಿಸುವುದು.**
9. **ಫೇಟೆಂಟ್ ಘಟಕವನ್ನು ಸ್ಥಾಪಿಸುವುದು ಹಾಗೂ ಪೇಟೆಂಟ್‌ಗೆ ಅರ್ಜಿ ಸಲ್ಲಿಸಲು ಅವಶ್ಯವಿರುವ ಹಣಕಾಸು, ತಾಂತ್ರಿಕ ಹಾಗೂ ಶೈಕ್ಷಣಿಕ ಸಹಕಾರ ನೀಡುವುದು.**

**10**. ಭೋದಕರನ್ನು ಉತ್ತೇಜಿಸಲು ಈ ಕೆಳಕಂಡ ಪ್ರಶಸ್ತಿಗಳನ್ನು ಪ್ರತಿಷ್ಠಾಪಿಸಿ ಪ್ರತಿ ವರ್ಷದ ಶಿಕ್ಷಕರ ದಿನಾಚರಣೆಯಂದು ನೀಡುವುದು.

- **a.** ಶ್ರೇಷ್ಠ ಸಂಶೋಧಕರು ಪ್ರಶಸ್ತಿ
- **b.** ಶ್ರೇಷ್ಠ ಪ್ರಕಟಣೆಯ ಲೇಖಕರು ಪ್ರಶಸ್ತಿ
- **c.** ಶ್ರೇಷ್ಠ ಅಧ್ಯಯನ ವಿಭಾಗ
- **d.** ಅವಿಷ್ಕಾರಿ ಶಿಕ್ಷಕ ಪ್ರಶಸ್ತಿ
- **e.** ಬದಲಾವಣೆ ಹರಿಕಾರ ಪ್ರಶಸ್ತಿ

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.23

**ವಿಷಯ:** Policy Document on Consultancy ಗೆ ಅನುಮೋದನೆ ಕೋರುವ ಬಗ್ಗೆ.

*****

ವಿಶ್ವವಿದ್ಯಾನಿಲಯಕ್ಕೆ NAAC ಮಾನ್ಯತೆಯನ್ನು ಪಡೆಯುವ ಸಂಬಂಧ NAAC Manual ನ Criteria-3 ರಲ್ಲಿನ ನ 3.5.1 Policy Document on Consultancy ನಲ್ಲಿ ತಿಳಿಸಿರುವಂತೆ ವಿಶ್ವವಿದ್ಯಾನಿಲಯ ಹಾಗು ಇತರೆ ಸಂಸ್ಥೆಗಳ ನಡುವೆ Consultancy based ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂದಿಸಿದಂತೆ Policy ಯನ್ನು ಹೊಂದುವುದು ಅವಶ್ಯವಾಗಿರುತ್ತದೆ. NAAC ಮಾನ್ಯತೆಯನ್ನು ಪಡೆಯಲು ಸದರಿ Policy Document ಗಾಗಿ 02 weightage points ಗಳನ್ನು ನಿಗದಿಪಡಿಸಲಾಗಿರುತ್ತದೆ.

ಈ ಸಂಬಂಧ ವಿಶ್ವವಿದ್ಯಾನಿಲಯದ Policy Documents on Consultancy ಅನ್ನು ಸಿದ್ದಪಡಿಸಲು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ತಜ್ಞರ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ದಿನಾಂಕ: 09.02.2022 ಹಾಗೂ 13.05.2022 ರಂದು ಸಭೆ ಸೇರಿ Policy Document on Consultancy ನ ಕರಡನ್ನು ಸಿದ್ದಪಡಿಸಲಾಗಿರುತ್ತದೆ.

Policy Document on Consultancy ಅನ್ನು ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆ ಕೋರಿ ವಿಷಯ ಮಂಡಿಸಿದೆ.

**ತೀರ್ಮಾನ : Policy Document on Consultancy ಅನ್ನು ಶೈಕ್ಷಣಿಕ ಮಂಡಳಿ ಸಭೆಯು ಅನುಮೋದಿಸಿತು. ಇಂತಹ Consultancy ಸೇವೆಗಳನ್ನು ಕೈಗತ್ತಿಕೊಳ್ಳುವ ಅಧ್ಯಾಪಕರನ್ನು ಪ್ರೋತ್ಸಾಹಿಸಲು ಹಾಗೂ ಅಗತ್ಯ ಸೌಕರ್ಯಗಳನ್ನು ನೀಡಲು ಸಭೆಯು ನಿರ್ಧರಿಸಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.24

**ವಿಷಯ:** Policy Document on Open Education Resources ಗೆ ಅನುಮೋದನೆ ಕೋರುವ ಬಗ್ಗೆ.

*****

ವಿಶ್ವವಿದ್ಯಾನಿಲಯಕ್ಕೆ NAAC ಮಾನ್ಯತೆಯನ್ನು ಪಡೆಯುವ ಸಂಬಂಧ NAAC Manual ನ Criteria-1 ರಲ್ಲಿನ ನ 1.1.4 Courses being offered as MOOCs or using OERs ಹಾಗೂ Criteria-3 ರಲ್ಲಿನ 3.3.2 Workshops / seminars conducted on innovative practices ನಲ್ಲಿ ತಿಳಿಸಿರುವಂತೆ ವಿಶ್ವವಿದ್ಯಾನಿಲಯದಲ್ಲಿ Open Education Resources ಕುರಿತಾದ document ಅನ್ನು ಹೊಂದುವುದು ಅವಶ್ಯವಾಗಿರುತ್ತದೆ. NAAC ಮಾನ್ಯತೆಯನ್ನು ಪಡೆಯಲು ಸದರಿ Policy Document ಗಾಗಿ 15 weightage points ಗಳನ್ನು ನಿಗದಿಪಡಿಸಲಾಗಿರುತ್ತದೆ.

ಈ ಸಂಬಂಧ ವಿಶ್ವವಿದ್ಯಾನಿಲಯದ Policy Document on Open Education Resources ಅನ್ನು ಸಿದ್ದಪಡಿಸಲು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ CEMCA, ನವದೆಹಲಿ ಇವರ ಸಹಯೋಗದಲ್ಲಿ ಎಲ್ಲಾ ವಿಭಾಗದ ಮುಖ್ಯಸ್ಥರಿಗೆ ಎರಡು ದಿನದ ಕಾರ್ಯಗಾರ ನಡಿಸಿ, ತಜ್ಞರ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ದಿನಾಂಕ: 28.04.2022 ಹಾಗೂ 29.04.2022 ರಂದು ಕಾರ್ಯಗಾರದಲ್ಲಿ Policy Document on Open Education Resources ನ ಕರಡನ್ನು ಸಿದ್ದಪಡಿಸಿರುತ್ತದೆ, ಮುಂದುವರಿದು ಸದರಿ ಕರಡು ಪಾಲಿಸಿಯಲ್ಲಿ ಪ್ರಸ್ತಾಪಿಸಿರುವಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳನ್ನು Open Education Resources ನಂತೆ ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ upload ಮಾಡುವ ಬಗ್ಗೆ ಶೈಕ್ಷಣಿಕ ಮಂಡಳಿಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

Policy Document on Open Education Resources ಅನ್ನು ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆ ಕೋರಿ ವಿಷಯ ಮಂಡಿಸಿದೆ.

ತೀರ್ಮಾನ : **Policy Document on Open Education Resources ಅನ್ನು ಅನುಮೋದಿಸಿತು. ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ Non-CBCS ಅಧ್ಯಯನ ಸಾಮಗ್ರಿಗಳನ್ನು, ಸಮ್ಮೇಳನ ಮತ್ತು ಕಾರ್ಯಗಾರಗಳ ವರದಿಯನ್ನು Open Education Resources ರೂಪದಲ್ಲಿ ಅಪ್ಲೋಡ್ ಮಾಡಲು ಶೈಕ್ಷಣಿಕ ಮಂಡಳಿ ಸಭೆಯು ಅನುಮೋದಿಸಿತು. ವಿವಿಯಲ್ಲಿ Open Education Resources ಸಂಬಂಧ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಒಂದು Open Education Resources ಸಮಿತಿಯನ್ನು ರಚಿಸಲು ತೀರ್ಮಾನಿಸಿ ಸದರಿ ಸಮಿತಿಯ ಶಿಫಾರಸ್ಸುಗಳನ್ನು ಕಾಲಕಾಲಕ್ಕೆ ಅಳವಡಿಸಿಕೊಳ್ಳಲು ತೀರ್ಮಾನಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.25

**ವಿಷಯ:** Policy Document on Lateral Entry and Lateral Exit ಗೆ ಅನುಮೋದನೆ ಕೋರುವ ಬಗ್ಗೆ.

*****

ವಿಶ್ವವಿದ್ಯಾನಿಲಯಕ್ಕೆ NAAC ಮಾನ್ಯತೆಯನ್ನು ಪಡೆಯುವ ಸಂಬಂಧ NAAC Manual ನ Criteria-1 ರಲ್ಲಿನ ನ 1.2.3 enabling provision for lateral entry for learners and 1.2.4 enabling provision for modular approach ನಲ್ಲಿ ತಿಳಿಸಿರುವಂತೆ ಹಾಗೂ ಹೊಸ ಶಿಕ್ಷಣ ನೀತಿಯ ಆಶಯದಂತೆ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳಿಗೆ Lateral Entry ಹಾಗೂ Lateral Exit ಗೆ ಅವಕಾಶವನ್ನು ಕಲ್ಪಿಸಿ ಅವರು ಅಧ್ಯಯನ ಮಾಡಿರುವ ಅವಧಿಗೆ ಸೂಕ್ತ ಪ್ರಮಾಣ ಪತ್ರವನ್ನು ಒದಗಿಸಲು ಅನುವಾಗುವಂತೆ, Lateral Entry ಹಾಗೂ Lateral Exit ಕುರಿತಾದ document ಅನ್ನು ಹೊಂದುವುದು ಅವಶ್ಯವಾಗಿರುತ್ತದೆ. NAAC ಮಾನ್ಯತೆಯನ್ನು ಪಡೆಯಲು ಸದರಿ Policy Document ಗಾಗಿ 20 weightage points ಗಳನ್ನು ನಿಗದಿಪಡಿಸಲಾಗಿರುತ್ತದೆ.

ಈ ಸಂಬಂಧ ವಿಶ್ವವಿದ್ಯಾನಿಲಯದ Policy Document on Lateral Entry and Lateral Exit ಅನ್ನು ಸಿದ್ದಪಡಿಸಲು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ತಜ್ಞರ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ದಿನಾಂಕ: 18.05.2022ರಂದು ಸಭೆ ಸೇರಿ Policy Document on Lateral Entry and Lateral Exit ನ ಕರಡನ್ನು ಸಿದ್ದಪಡಿಸಿರುತ್ತದೆ.

Policy Document on Lateral Entry and Lateral Exit ಅನ್ನು ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆ ಕೋರಿ ವಿಷಯ ಮಂಡಿಸಿದೆ.

<u>ತೀರ್ಮಾನ</u> : **Policy Document on Lateral Entry and Lateral Exit ಅನ್ನು ಅನುಷ್ಠಾನಗೊಳಿಸಲು ಶೈಕ್ಷಣಿಕ ಮಂಡಳಿ ಸಭೆಯು ಅನುಮೋದಿಸಿತು. ಸದರಿ Policy Document ನಲ್ಲಿ ತಿಳಿಸಿರುವಂತೆ ಆಯಾ ಕಾರ್ಯಕ್ರಮಗಳಿಗೆ ಅನ್ವಯಿಸುವ** Lateral Entry **ಬಗ್ಗೆ ಸಂಬಂಧಪಟ್ಟ ವಿಭಾಗಗಳ ಅಧ್ಯಯನ ಮಂಡಳಿ ಸಭೆಗಳಲ್ಲಿ ತೀರ್ಮಾನ ಕೈಗೊಳ್ಳಲು ತಿಳಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

**ವಿಷಯ ಸಂಖ್ಯೆ: 59.26**

**ವಿಷಯ:** Policy Document on Learner Welfare System ಗೆ ಅನುಮೋದನೆ ಕೋರುವ ಬಗ್ಗೆ.

*****

ವಿಶ್ವವಿದ್ಯಾನಿಲಯಕ್ಕೆ NAAC ಮಾನ್ಯತೆಯನ್ನು ಪಡೆಯುವ ಸಂಬಂಧ NAAC Manual ನ Criteria-5 ರಲ್ಲಿನ ನ 5.1.7 Addressing Learners Grievances ನಲ್ಲಿ ತಿಳಿಸಿರುವಂತೆ ವಿಶ್ವವಿದ್ಯಾನಿಲಯದಲ್ಲಿ Learner Welfare System ಕುರಿತಾದ document ಅನ್ನು ಹೊಂದುವುದು ಅವಶ್ಯವಾಗಿರುತ್ತದೆ. NAAC ಮಾನ್ಯತೆಯನ್ನು ಪಡೆಯಲು ಸದರಿ Policy Documentಗಾಗಿ 05 weightage points ಗಳನ್ನು ನಿಗದಿಪಡಿಸಲಾಗಿರುತ್ತದೆ.

ಈ ಸಂಬಂಧ ವಿಶ್ವವಿದ್ಯಾನಿಲಯದಲ್ಲಿ Addressing Learners Grievances ಅನ್ನು ಒಳಗೊಂಡಂತೆ Policy Document on Learner Welfare System ಅನ್ನು ಸಿದ್ದಪಡಿಸಲು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ತಜ್ಞರ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ದಿನಾಂಕ: 04.05.2022ರಂದು ಸಭೆ ಸೇರಿ Policy Document on Learner Welfare System ನ ಕರಡನ್ನು ಸಿದ್ದಪಡಿಸಲಾಗಿರುತ್ತದೆ.

Policy Document on Learner Welfare System ಅನ್ನು ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆ ಕೋರಿ ವಿಷಯ ಮಂಡಿಸಿದೆ.

<u>ತೀರ್ಮಾನ</u> : **Policy Document on Learner Welfare System ಅನ್ನು ಶೈಕ್ಷಣಿಕ ಮಂಡಳಿ ಸಭೆಯು ಅನುಮೋದಿಸಿತು. ಸದರಿ Policy Document ನಲ್ಲಿ ತಿಳಿಸಿರುವಂತೆ Learner Welfare ಘಟಕವನ್ನು ಸ್ಥಾಪಿಸಿ, ಸಿಬ್ಬಂದಿಗಳನ್ನು ನಿಯೋಜಿಸಿರುವುದನ್ನು ಅನುಸಮರ್ಥಿಸಲಾಯಿತು. ವಿದ್ಯಾರ್ಥಿಗಳಿಗೆ ಹಾಗೂ ಪ್ರವೇಶಾರ್ಥಿಗಳಿಗೆ ಸಮರ್ಥ ಸೇವೆ ಒದಗಿಸುವ ನಿಟ್ಟಿನಲ್ಲಿ ಹೊರ ಗುತ್ತಿಗೆ ಮೂಲಕ ಒಂದು Call Center ಸ್ಥಾಪಿಸಲು ಅನುಮೋದನೆ ನೀಡಲಾಯಿತು.**

**ಕುಲಸಚಿವರು** **ಕುಲಪತಿಗಳು**

**<u>ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು</u>**

## ವಿಷಯ ಸಂಖ್ಯೆ: 59.27

**ವಿಷಯ :** ನಿರಂತರ ಪ್ರವೇಶಾತಿ ಪ್ರಕ್ರಿಯೆ ನಡೆಸುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಜುಲೈ ಮತ್ತು ಜನವರಿ ಆವೃತ್ತಿಯಂತೆ ವರ್ಷಕ್ಕೆ ಎರಡು ಬಾರಿ ಪ್ರವೇಶಾತಿಯನ್ನು ನಡೆಸಲಾಗುತ್ತಿದ್ದು, ಯುಜಿಸಿಯು ಪ್ರವೇಶಾತಿಯ ಅಂತಿಮ ದಿನಾಂಕವನ್ನು ಮಾತ್ರ ನಿಗದಿಪಡಿಸಿ ಪ್ರಕಟಿಸಲಾಗುತ್ತಿದ್ದು, ಪ್ರವೇಶಾತಿಯ ಪ್ರಾರಂಭಿಕ ದಿನಾಂಕವನ್ನು ಪ್ರಕಟಿಸುವುದಿಲ್ಲ.

ದಿನಾಂಕ:21–02–2022 ರಂದು ಬೆಂಗಳೂರಿನಲ್ಲಿ ನಡೆದ ಅಖಿತ ಭಾರತ ಮುಕ್ತ ವಿವಿಗಳ ಕುಲಪತಿಗಳ ಸಭೆಯಲ್ಲಿ, ಬೇರೆ ಬೇರೆ ವಿಶ್ವವಿದ್ಯಾನಿಲಯಗಳು (ಡಾ.ಬಿ.ಆರ್. ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾನಿಲಯ, ಅಹಮದಾಬಾದ್, ಗುಜರಾತ್ ಹಾಗೂ ಇತರೆ ಮುಕ್ತ ವಿವಿಗಳಲ್ಲಿ ಪ್ರವೇಶಾತಿ ನಡೆಸುತ್ತಿರುವ ವಿಚಾರ ಪ್ರಸ್ತಾಪಕ್ಕೆ ಬಂದಿದ್ದು, ಅದರಂತೆ, ಇತರೆ ವಿವಿಗಳು ವರ್ಷವೀಡಿ ಪ್ರವೇಶಾತಿ ಪಡೆಯುತ್ತಿದ್ದು, ನಮ್ಮ ವಿಶ್ವವಿದ್ಯಾನಿಲಯದಲ್ಲಿ ಇದೇ ಕ್ರಮವನ್ನು ಅನುಸರಿಸಬೇಕು ಎಂದು CIQA ನಿರ್ದೇಶಕರು ಅಭಿಪ್ರಾಯ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ಪ್ರವೇಶಾತಿ ವಿಭಾಗದಿಂದ ಪ್ರಸ್ತಾವನೆ ಸಲ್ಲಿಸಿರುತ್ತಾರೆ. (ಪ್ರತಿ ಲಗತ್ತಿಸಿದೆ)

**ಜುಲೈ ಮತ್ತು ಜನವರಿ ಆವೃತ್ತಿಯ ಪ್ರವೇಶಾತಿಯನ್ನು ಯುಜಿಸಿಯು ಆಯಾಯ ಆವೃತ್ತಿಗೆ ಅಂತಿಮ ದಿನಾಂಕವನ್ನು ಪ್ರಕಟಿಸುವವರೆಗೂ ಪ್ರವೇಶಾತಿ ಮಾಡಿಕೊಳ್ಳಲು ಅಂದರೆ,**

- <u>ಜುಲೈ ಆವೃತ್ತಿಗೆ</u> ವಿವಿಧ **ಶಿಕ್ಷಣಕ್ರಮಗಳ ಪ್ರವೇಶಾತಿಯನ್ನು ಪ್ರಾರಂಭಿಸಿ ಯುಜಿಸಿಯು ಅಂತಿಮ/ಕೊನೆಯ ದಿನಾಂಕವನ್ನು** ನಿಗದಿಪಡಿಸಿ **ಪ್ರಕಟಿಸುವವರೆಗೂ ಪ್ರವೇಶಾತಿ ನಡೆಸುವುದು.**
- **ಜುಲೈ ಆವೃತ್ತಿ ಪ್ರವೇಶಾತಿ ಮುಗಿದ ತಕ್ಷಣ <u>ಜನವರಿ ಆವೃತ್ತಿಗೆ</u> ಪ್ರವೇಶಾತಿ ಆರಂಭಿಸಿ, ಯುಜಿಸಿ ಅಂತಿಮ ದಿನಾಂಕವನ್ನು ಪ್ರಕಟಿಸುವವರೆಗೂ ಪ್ರವೇಶಾತಿ ನಡೆಸುವುದು.**
- **ಜನವರಿ ಆವೃತ್ತಿ ಪ್ರವೇಶಾತಿ ಮುಗಿದ ತಕ್ಷಣ ಪ್ರವೇಶಾತಿ <u>ಜುಲೈ ಆವೃತ್ತಿಗೆ</u> ಪ್ರವೇಶಾತಿ ಆರಂಭಿಸಿ, ಯುಜಿಸಿ ಅಂತಿಮ ದಿನಾಂಕವನ್ನು ಪ್ರಕಟಿಸುವವರೆಗೂ ಪ್ರವೇಶಾತಿ ನಡೆಸುವುದು.**

**ಹೀಗೆ ವರ್ಷಪೂರ್ತಿ ನಿರಂತರ ಪ್ರವೇಶಾತಿ ಪಡೆಯುವುದರ ಸಂಬಂಧ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.**

**<u>ಚರ್ಚೆ</u> : ಪ್ರಸ್ತುತ ಯುಜಿಸಿಯು ಪ್ರವೇಶಾತಿಗೆ ಸಂಬಂಧಿಸಿದಂತೆ ಕೇವಲ ಅಂತಿಮ ದಿನಾಂಕವನ್ನು ಮಾತ್ರ ನಿಗದಿಪಡಿಸುತ್ತಿದ್ದು, ಆರಂಭದ ದಿನಾಂಕಗಳನ್ನು ಆಯಾ ವಿವಿಗಳ ನಿರ್ಧಾರಕ್ಕೆ ಬಿಟ್ಟಿದೆ.**

**<u>ತೀರ್ಮಾನ:</u> ಸದರಿ ವಿಷಯದ ಬಗ್ಗೆ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳುವ ಅಗತ್ಯವಿಲ್ಲವೆಂದು ತೀರ್ಮಾನಿಸಿ ಸದರಿ ವಿಷಯದ ಬಗ್ಗೆ ಅನುಮೋದನೆಯನ್ನು ಪ್ರವೇಶಾತಿ ವಿಭಾಗದವರಿಗೆ ಕಡತದ ಮೂಲಕ ಪಡೆಯಲು ತಿಳಿಸಲು ತೀರ್ಮಾನಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

**ವಿಷಯ ಸಂಖ್ಯೆ: 59.28**

**ವಿಷಯ**: Futureminds, Bangalore., ಇವರ ಸಹಯೋಗದೊಂದಿಗೆ Certificate Programme on English, Employment and Entrepreneurship (EE&E)ನ್ನು ಕರಾಮುವಿಯಲ್ಲಿ ಆರಂಭಿಸುವ ಬಗ್ಗೆ.

* * * *

ಮೇಲಿನ Certificate Programme on English, Employment and Entrepreneurship (EE&E) ನ್ನು Futureminds Bangalore., ಇವರು ವಾಣಿಜ್ಯಶಾಸ್ತ್ರ ವಿಭಾಗ, ಕರಾಮುವಿಯ ಸಹಯೋಗದೊಂದಿಗೆ ಆರಂಭಿಸುವ ಸಂಬಂಧ ದಿನಾಂಕ:29.03.2022ರಂದು ನಡೆದ (Agenda No:04) BOSನಲ್ಲಿ ತೀರ್ಮಾನಗೊಂಡಿರುತ್ತದೆ. ಮುಂದುವರೆದು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸ್ಥಳೀಯ ತಪಾಸಣಾ ಸಮಿತಿ ವರದಿ ಹಾಗೂ ಸದರಿ Certificate ಕಾರ್ಯಕ್ರಮ ಪ್ರಸಕ್ತ ಶೈಕ್ಷಣಿಕ ಸಾಲಿನಿಂದ ಕರಾಮುವಿಯಲ್ಲಿ ಅರಂಭಿಸುವ ಸಂಬಂಧ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**<u>ತೀರ್ಮಾನ</u> : ಜುಲೈ 2022–23ನೇ ಶೈಕ್ಷಣಿಕ ಸಾಲಿನಲ್ಲಿ ಸದರಿ ಸರ್ಟಿಫೀಕೇಟ್ ಕಾರ್ಯಕ್ರಮ ಆರಂಭಿಸಲು ತೀರ್ಮಾನಿಸಲಾಯಿತು. ಶುಲ್ಕ ನಿಗದಿ ಹಾಗೂ ಆದಾಯ ವಿತರಣೆ ಸಂಬಂಧ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆಯುವ ELSC Monitoring Committee ಸಭೆಯ ನಡಾವಳಿಯಂತೆ ಕ್ರಮವಹಿಸಲು ಸಭೆಯು ಅನುಮೋದಿಸಿತು. ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ಕಾಯ್ದಿರಿಸಿ Futureminds, Bangalore., ಇವರ ಸಹಯೋಗದೊಂದಿಗೆ LOA ಮಾಡಿಕೊಳ್ಳಲು ಸಭೆಯು ಅನುಮೋದನೆ ನೀಡಿತು. ಸದರಿ ಕಾರ್ಯಕ್ರಮಕ್ಕೆ ಡಾ॥ ಮಹೇಶ .ವಿ. ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಇವರನ್ನು Programme Coordinator ಆಗಿ ನೇಮಕಾತಿ ಮಾಡಲು ಸಭೆಯು ನಿರ್ಧರಿಸಿತು.**

**ಕುಲಸಚಿವರು** | **ಕುಲಪತಿಗಳು**

## ವಿಷಯ ಸಂಖ್ಯೆ: 59.29

ವಿಷಯ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ನಾತಕ ಮತ್ತು ಸ್ನಾತಕೋತ್ತರ ಶಿಕ್ಷಣಕ್ರಮಗಳ ಅಧ್ಯಯನ ಮಂಡಳಿಗಳ ರಚನೆ ಮತ್ತು ಅಧ್ಯಕ್ಷರನ್ನು ನೇಮಿಸಿರುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೆಲವು ಸ್ನಾತಕ ಮತ್ತು ಸ್ನಾತಕೋತ್ತರ ಶಿಕ್ಷಣಕ್ರಮಗಳಿಗೆ ರಚಿತವಾಗಿದ್ದ, ಅಧ್ಯಯನ ಮಂಡಳಿಗಳ ಅವಧಿಯು ಪೂರ್ಣಗೊಂಡಿದ್ದ, ಹಿನ್ನೆಲೆಯಲ್ಲಿ ಕರಾಮುವಿ ಪರಿನಿಯಮ IIರ ಅನ್ವಯ ಅಧ್ಯಯನ ಮಂಡಳಿಗಳನ್ನು ರಚಿಸಿ ಕಚೇರಿ ಆದೇಶಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗಿರುತ್ತದೆ. ಈ ಸಂಬಂಧದ ಕಚೇರಿ ಆದೇಶ ಸಂಖ್ಯೆ ಮತ್ತು ಅಧ್ಯಯನ ಮಂಡಳಿಗಳ ಯುಜಿ, ಪಿಜಿ ಹಾಗೂ ಸಂಯುಕ್ತ ಅಧ್ಯಯನ ಮಂಡಳಿಯ ಅಧ್ಯಕ್ಷರುಗಳ ವಿವರ ಕೆಳಕಂಡಂತಿದೆ. ಈ ಎಲ್ಲಾ ಮಂಡಳಿಗಳ ಅಧ್ಯಕ್ಷರು ಮತ್ತು ಸದಸ್ಯರುಗಳನ್ನೊಳಗೊಂಡ ಆದೇಶಗಳ ಪ್ರತಿ ಲಗತ್ತಿಸಿದೆ.
ಈ ಸಂಬಂಧ ಶೈಕ್ಷಣಿಕ ಮಂಡಳಿಯ ಅನುಸಮರ್ಥನೆ ಪಡೆಯುವ ನಿಟ್ಟಿನಲ್ಲಿ ವಿಷಯ ಮಂಡಿಸಿದೆ.

## Board of studies Chairman/Chairperson and their term

| Sl. No | Departments | PG BOS Chairman | UG BOS Chairman | Composit BOS Chairman | Remark |
|---|---|---|---|---|---|
| 1 | Kannada Studies and Research | **Dr. N R Chandre Gowda** 8/02/22 to 07/02/2025 | **Dr. Jyothi Shankar** 8/02/22 to 07/02/2025 | - | - |
| 2 | English Studies and Research | **Dr. Nataraju.G.** 8/02/22 to 07/02/2025 | **Dr. Srikanth.S.** 8/02/22 to 07/02/2025 | - | - |
| 3 | Hindi Studies and Research | **Dr.Prabusena.D.** 8/02/22 to 07/02/2025 | **Dr. Prabusena.D.** 8/02/22 to 07/02/2025 | - | - |
| 4 | Sanskrit Studies and Research | - | - | **Dr.Shalva Pille Iyengar** 8/02/22 to 07/02/2025 | - |
| 5 | Telugu Studies and Research | - | - | **Prof. Ramanatha Naidu M** 4/02/2021 to 3/02/2024 | - |
| 6 | History Studies and Research | **Dr.V.M.Ramesh** 8/02/22 to 07/02/2025 | **Dr. C. Ramegowda** 8/02/22 to 07/02/2025 | - | - |
| 7 | Economics Studies and Research | **Dr.R.H. Pavithra** 8/02/22 to 07/02/2025 | **Dr.R.H.Pavithra** 8/02/22 to 07/02/2025 | - | - |

| | | | | | |
|---|---|---|---|---|---|
| 8 | Political Science Studies and Research and Law | **Dr.N. Anandagowda** 8/02/22 to 07/02/2025 | **Dr.N. Anandagowda** 8/02/22 to 07/02/2025 | Law Subject BOS Chairman Dr. Jhanavi | - |
| 9 | Sociology Studies and Research and Anthropology | **Dr. H.R. Jayapal** 8/02/22 to 07/02/2025 | **Dr. Santhosh Nayak R** 8/02/22 to 07/02/2025 | BSW & MSW BOS Chairman Dr.H.R Jayapal 29/09/21 to 19/09/2024 | - |
| 10 | Psychology Studies and Research | **Dr. Manjunath P** 8/02/22 to 07/02/2025 | - | - | - |
| 11 | Mass Communication and Journalism Studies and Research | - | - | **Dr. Hemalatha R** 8/02/22 to 07/02/2025 | - |
| 12 | Library and Information Science Studies and Research | - | - | **Dr. Shilpa Rani N R** 8/02/22 to 07/02/2025 | - |
| 13 | Ancient History & Archaeology Studies and Research | **Dr.Shalva Pille Iyengar** 8/02/22 to 07/02/2025 | - | - | - |
| 14 | Commerce Studies and Research | **Dr. Mahesha V** 8/02/22 to 07/02/2025 | **Dr. Usha C** 8/02/22 to 07/02/2025 | - | - |
| 15 | Management Studies and Research | **Dr. Rajeshwari. H.** 8/02/22 to 07/02/2025 | **Dr. Rajeshwari. H.** 07/03/2020 to 06/03/2023 | - | |
| 16 | Education Studies and Research | **Dr. N Lakshmi** 07/02/19 to 06/12/23 | **Dr. Krishnappa.N.** 8/02/22 to 07/02/2025 **Dr. Nagendra Kumar. R** 8/02/22 to 07/02/2025 | - | - |
| 17 | Computer Science Studies | - | - | **Dr. D.M. Mahesh** 26/12/2019 to25/12/2022 | - |

| | | | | | |
|---|---|---|---|---|---|
| 18 | Food Science & Nutrition and Clinical Nutrition and Deities Studies and Research | **Dr. Hemalatha M.S** 8/02/22 to 07/02/2025 | **Dr. Hemalatha M.S** 8/02/22 to 07/02/2025 | - | - |
| 19 | Environmental Science Studies and Research | - | - | **Dr. J.S Chandrashekar** 30/12/2019 to 29/12/2022 | - |
| 20 | Information Technology Studies and Research | - | - | **Dr. Sanjaya H.A.** 12/11/2019 ರಿಂದ ಮುಂದಿನ ಆದೇಶದವರಿಗೆ | - |
| 21 | Mathematics Studies, | **Dr. Shivashankara K** 17/12/2019 to 16/12/2022 | **Dr. Shivashankara K** 17/12/2019 to 16/12/2022 | - | - |
| 22 | Geography Studies and Research | **Dr. Manjunath C S** 8/02/22 to 07/02/2025 | **Dr. Y P Chandrashekar** 8/02/22 to 07/02/2025 | - | - |
| 23 | Physics Studies | - | - | **Dr. N.K. Lokanath** 21/03/20 to 20/03/2023 | - |
| 24 | Chemistry Studies and Research | - | - | **Dr. Umashankar M** 8/02/22 to 07/02/2025 | - |
| 25 | Biochemistry Studies and Research | **Dr. Nataraju Angaswamy** 8/02/22 to 07/02/2025 | - | - | - |
| 26 | Microbiology Studies and Research | - | - | **Dr. Niranjan Raj S** 8/02/22 to 07/02/2025 | - |
| 27 | Biotechnology Studies and Research | - | - | **Dr. N G Raju** 8/02/22 to 07/02/2025 | - |

| | | | | | |
|---|---|---|---|---|---|
| 28 | Zoology Studies and Research | - | - | **Dr. N G Raju** 8/02/22 to 07/02/2025 | - |
| 29 | Botony Studies and Research | - | - | **Dr. Niranjan Raj S** 4/03/20 to 03/03/2023 | - |
| 30 | Kuvempu Studies and Research Center | **Dr. N R Chandre Gowda** 30/06/2020 ರಿಂದ ಮುಂದಿನ ಆದೇಶದವರಿಗೆ | - | - | - |
| 31 | Ambedkar Studies and Research Center | **Dr. Shivakumar Swamy** 19/06/2020 ರಿಂದ ಮುಂದಿನ ಆದೇಶದವರಿಗೆ | - | - | - |
| 32 | Women's Studies and Research | **Dr.T M Geethanjali** 30/08/2021 to29/08/2024 | - | - | - |
| 33 | Public Admistrative General Studies | **Dr. H.K.Jagadeesh Babu** 11/11/2019 to ರಿಂದ ಮುಂದಿನ ಆದೇಶದವರಿಗೆ | - | - | - |

**ತೀರ್ಮಾನ : ಸ್ನಾತಕ ಮತ್ತು ಸ್ನಾತಕೋತ್ತರ ಶಿಕ್ಷಣಕ್ರಮಗಳಿಗೆ ರಚಿತವಾಗಿದ್ದ, ಕಚೇರಿ ಆದೇಶ ಮತ್ತು ಯುಜಿ, ಪಿಜಿ ಮತ್ತು ಸಂಯುಕ್ತ ಅಧ್ಯಯನ ಮಂಡಳಿಗಳ ಅಧ್ಯಕ್ಷರುಗಳ ನೇಮಕಾತಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಿ ಅನುಸಮರ್ಥನೆಗೊಳಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.30

**ವಿಷಯ** : ಕರಾಮುವಿಯ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳಿಗೆ Programme Coordinator ಗಳನ್ನು ನಿಯೋಜಿಸುವ ಬಗೆಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಯುಜಿಸಿಯ ನಿಯಾಮಾವಳಿಯ ಪ್ರಕಾರ ವಿಶ್ವವಿದ್ಯಾನಿಲಯದ ಎಲ್ಲಾ ಶಿಕ್ಷಣಕ್ರಮಗಳ ಶೈಕ್ಷಣಿಕ ಕಾರ್ಯ ಚಟುವಟಿಕೆ ಸುಗಮ ನಿರ್ವಹಣೆ ದೃಷ್ಠಿಯಿಂದ ಪ್ರತಿ ಕಾರ್ಯಕ್ರಮಕ್ಕೆ Programme Coordinator ಗಳನ್ನು **ಪರಿಷ್ಕೃತ ಕಚೇರಿ ಆದೇಶ ಸಂಖ್ಯೆ: ಕರಾಮುವಿ/ಡೀನ್ (ಶೈ)/02/2021–22 ದಿನಾಂಕ:11.05.2022** ರಂತೆ ನಿಯೋಜಿಸಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ.)

ಈ ಸಂಬಂಧ ಶೈಕ್ಷಣಿಕ ಮಂಡಳಿಯ ಅನುಸಮರ್ಥನೆ ಪಡೆಯುವ ನಿಟ್ಟಿನಲ್ಲಿ ವಿಷಯ ಮಂಡಿಸಿದೆ.

**ತೀರ್ಮಾನ : Programme Coordinator ಗಳನ್ನು ನಿಯೋಜಿಸಿರುವುದನ್ನು ಅನುಸಮರ್ಥನೆಗೊಳಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.31

**ವಿಷಯ :** 2021–22ನೇ ಸಾಲಿನ ಜುಲೈ ಮತ್ತು ಜನವರಿ ಆವೃತ್ತಿಯಲ್ಲಿ ಪ್ರವೇಶಾತಿ ಪಡೆದು ಮುದ್ರಿತ ಸಿದ್ಧಪಾಠ ಪಡೆಯದ ವಿದ್ಯಾರ್ಥಿಗಳಿಗೆ ಶುಲ್ಕ ರಿಯಾಯಿತಿ ನೀಡುವ ಬಗ್ಗೆ

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2021–22ನೇ ಸಾಲಿನ ಜುಲೈ ಮತ್ತು ಜನವರಿ ಆವೃತ್ತಿಯಲ್ಲಿ ಸ್ನಾತಕೋತ್ತರ ಕಾರ್ಯಕ್ರಮಗಳಲ್ಲಿ ಸಿಬಿಸಿಎಸ್ ಅಳವಡಿಸಲಾಗಿದ್ದು, ಇದರ ಅನ್ವಯ ಸೆಮಿಸ್ಟರ್ ಸ್ಕೀಮ್‌ನಲ್ಲಿ ಪಠ್ಯಕ್ರಮ ಪರಿಷ್ಕರಿಸಿದ್ದು, ಹೊಸದಾಗಿ ಸಿದ್ಧಪಾಠಗಳನ್ನು ರಚಿಸಲಾಗುತ್ತಿದೆ. ಸಿದ್ಧಪಾಠ ರಚನೆಯು ಬಹುತೇಕ ಪೂರ್ಣಗೊಂಡಿದ್ದು, ಸಿದ್ಧಪಾಠಗಳು ಮುದ್ರಣಗೊಳ್ಳಬೇಕಿದೆ. ಪ್ರಸ್ತುತ KSOU App ನಲ್ಲಿ ಸಿದ್ಧಪಾಠಗಳ ಸಾಫ್ಟ್ ಕಾಪಿಗಳನ್ನು ಅಪ್ಲೋಡ್ ಮಾಡಲಾಗಿದೆ. ಪ್ರಸಕ್ತ ಸಾಲಿಗೆ ಮುದ್ರಿತ ಸಿದ್ಧಪಾಠಗಳನ್ನು ವಿತರಿಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಮುದ್ರಿತ ಸಿದ್ಧಪಾಠಗಳನ್ನು ಪಡೆಯದ ವಿದ್ಯಾರ್ಥಿಗಳಿಗೆ ಶುಲ್ಕ ರಿಯಾಯಿತಿ ನೀಡುವ ಬಗ್ಗೆ ವಿಷಯ ಮಂಡಿಸಿದೆ.

<u>ತೀರ್ಮಾನ</u> : **2021–22ನೇ ಸಾಲಿನ ಜುಲೈ ಮತ್ತು ಜನವರಿ ಆವೃತ್ತಿಯಲ್ಲಿ ಪ್ರವೇಶಾತಿ ಪಡೆದು ಸಿದ್ಧಪಾಠ ಪಡೆಯದ ವಿದ್ಯಾರ್ಥಿಗಳಿಗೆ ಭೋದನಾ ಶುಲ್ಕದಲ್ಲಿ ಶೇ 15% ರಿಯಾಯಿತಿ ನೀಡಲು ತೀರ್ಮಾನಿಸಲಾಯಿತು. ಈ ರಿಯಾಯಿತಿಯನ್ನು ಎರಡನೇ ವರ್ಷದ ಪ್ರವೇಶಾತಿ ಪಡೆಯುವ ಸಂದರ್ಭದಲ್ಲಿ ಶುಲ್ಕವನ್ನು ಹೊಂದಾಣಿಕೆ ಮಾಡಿಕೊಳ್ಳಲು ತೀರ್ಮಾನಿಸಲಾಯಿತು.**

**ಮುಂದುವರೆದು, ಎರಡನೇ ವರ್ಷಕ್ಕೂ ಸಹ ಸಿದ್ಧಪಾಠಗಳು ಲಭ್ಯವಿಲ್ಲದಲ್ಲಿ ಆಗಲೂ ಸಹ ಭೋದನಾ ಶುಲ್ಕದಲ್ಲಿ ಶೇ 15% ರಿಯಾಯಿತಿ ನೀಡಲು ತೀರ್ಮಾನಿಸಲಾಯಿತು. ಅಲ್ಲದೇ ಸಿದ್ಧಪಾಠಗಳು ಮುದ್ರಣಗೊಂಡ ನಂತರ ಮುದ್ರಿತ ಸಿದ್ಧಪಾಠಗಳ ಬದಲಿಗೆ ಸಾಫ್ಟ್ ಕಾಪಿಯನ್ನು ಆಯ್ಕೆ ಮಾಡಿಕೊಳ್ಳುವ ವಿದ್ಯಾರ್ಥಿಗಳಿಗೆ ಭೋದನಾ ಶುಲ್ಕದಲ್ಲಿ ಶೇ 15% ರಿಯಾಯಿತಿ ನೀಡಲು ತೀರ್ಮಾನಿಸಲಾಯಿತು ಈ ರಿಯಾಯಿತಿಯನ್ನು ಮುದ್ರಿತ ಸಿದ್ಧಪಾಠಗಳು ಲಭ್ಯವಿರದ ಎಲ್ಲಾ ಕಾರ್ಯಕ್ರಮಗಳಿಗೆ (ಇತರೆ ಸಂಸ್ಥೆಗಳ ಸಹಯೋಗದಲ್ಲಿ ಆರಂಭಿಸಿರುವ ಕಾರ್ಯಕ್ರಮಗಳನ್ನು ಹೊರತು ಪಡಿಸಿ) ವಿಸ್ತರಿಸಲು ತೀರ್ಮಾನಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.32

**ವಿಷಯ :** Center for Online Education ಗೆ ನಿರ್ದೇಶಕರ ನೇಮಕಾತಿಯನ್ನು ಅನುಸಮರ್ಥನೆಗೊಳಿಸುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಆನ್‌ಲೈನ್ ಕಾರ್ಯಕ್ರಮಗಳನ್ನು ನಡೆಸಲು ಕ್ರಮವಹಿಸಲಾಗುತ್ತಿದ್ದು, ಆನ್‌ಲೈನ್ ಕಾರ್ಯಕ್ರಮಗಳನ್ನು ಆರಂಭಿಸುವ ಸಲುವಾಗಿ ಆನ್‌ಲೈನ್ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಆಧ್ಯಾದೇಶವನ್ನು ರಚಿಸಲಾಗಿದೆ. ಇದರ ಅನ್ವಯ ಕರಾಮುವಿಯಲ್ಲಿ Center for Online Education ಗೆ ನಿರ್ದೇಶಕರನ್ನು ನೇಮಿಸಲಾಗಿದೆ. ಪ್ರಸ್ತುತ 2022–23ನೇ ಸಾಲಿನಲ್ಲಿ ಹೊಸ ಶಿಕ್ಷಣಕ್ರಮಗಳನ್ನು ಆರಂಭಿಸಲು ಯುಜಿಸಿಗೆ ಪಿಪಿಆರ್‌ಗಳನ್ನು ಸಲ್ಲಿಸಿದ್ದು, ಪಿಪಿಆರ್ ಮತ್ತು ಅಫಿಡವಿಟ್‌ಗಳಿಗೆ ಸಿಓಇ ನಿರ್ದೇಶಕರ ಸಹಿ ಅಗತ್ಯವಿದ್ದು, ಈ ಹಿನ್ನೆಲೆಯಲ್ಲಿ Center for Online Education ಗೆ ನಿರ್ದೇಶಕರಾಗಿ ಡಾ. ನಿರಂಜನ್ ರಾಜ್ ಎಸ್. ಅವರನ್ನು **ಕಚೇರಿ ಆದೇಶ ಸಂಖ್ಯೆ: KSOU/EST-1/2022-23, ದಿನಾಂಕ:27–04–2022 ರ** ಅನ್ವಯ ನೇಮಿಸಲಾಗಿದ್ದು, ಸದರಿ ಪ್ರಕ್ರಿಯೆಗೆ ಅನುಸಮರ್ಥನೆ ಕೋರಿ ವಿಷಯ ಮಂಡಿಸಿದೆ.

<u>ತೀರ್ಮಾನ</u> : **Center for Online Education ಗೆ ಡಾ. ನಿರಂಜನ್ ರಾಜ್ ಎಸ್. ಸಹಾಯಕ ಪ್ರಾಧ್ಯಾಪಕರು, ಸೂಕ್ಷ್ಮ ಜೀವಶಾಸ್ತ್ರ ವಿಭಾಗ ಇವರನ್ನು ನಿರ್ದೇಶಕರನ್ನಾಗಿ ನೇಮಿಸಿರುವುದನ್ನು ಅನುಸಮರ್ಥನೆಗೊಳಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.33

**ವಿಷಯ :** Planing, Monitoring and Evaluvation Board (PMEB) ಗೆ ನಿರ್ದೇಶಕರ ನೇಮಕಾತಿಯನ್ನು ಅನುಸಮರ್ಥನೆಗೊಳಿಸುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ವಿವಿಧ ಶೈಕ್ಷಣಿಕ ಚಟುವಟಿಕೆಗಳ ವ್ಯವಸ್ಥಿತ ಯೋಜನೆಗಾಗಿ ವಿ.ವಿ ನಿಲಯಕ್ಕೆ ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿಯನ್ನು ಸ್ಥಾಪಿಸಲಾಗಿದೆ. ಸದರಿ ಮಂಡಳಿಯ ಮೂಲಕ ವಿಶ್ವವಿದ್ಯಾನಿಲಯದ ವ್ಯವಸ್ಥೆಯಲ್ಲಿ ಮಾನವ ಸಂಪನ್ಮೂಲವನ್ನು ಪರಿಣಾಮಕಾರಿಯಾಗಿ ಬಳಕೆ ಮಾಡಬಹುದಾಗಿದೆ. ಸದರಿ ಮಂಡಳಿಯ ಮೂಲಕ ವಾರ್ಷಿಕ ಶೈಕ್ಷಣಿಕ ಯೋಜನೆ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಾಡಬಹುದಾಗಿದೆ. ಮುಂದುವರೆದು, ಪ್ರಸ್ತುತ ಕರಾಮುವಿಯು ನ್ಯಾಕ್ ಮಾನ್ಯತೆ ಪಡೆಯಲು ಕ್ರಮವಹಿಸುತ್ತಿದ್ದು, ಹಿಂದಿನ ದಾಖಲೆಗಳನ್ನು ಕ್ರೋಢೀಕರಿಸುತ್ತಿದೆ. 2022–23ನೇ ಸಾಲಿನಿಂದ ನ್ಯಾಕ್ ಮರು ಮಾನ್ಯತೆ ಪಡೆಯಲು ಅವಶ್ಯವಿರುವ ಎಲ್ಲಾ ದಾಖಲೆಗಳನ್ನು ಕಾಲಕಾಲಕ್ಕೆ ಸಂಗ್ರಹಸಿ ರಕ್ಷಾ ಕಡತದಲ್ಲಿ ಸಂರಕ್ಷಿಸಬೇಕಾಗಿದೆ ಎಂಬ ಅಂಶವನ್ನು ಗಮನಕ್ಕೆ ತರಲಾಗಿದೆ. ಈ ಹಿನ್ನೆಲೆಯಲ್ಲಿ ಸದರಿ ಮಂಡಳಿಯ ರೂಪುರೇಷೆ ಕಾರ್ಯಗಳನ್ನು ನಿರ್ಧರಿಸುವ ಸಂಬಂಧ ಈ ವಿಷಯವನ್ನು ಚರ್ಚೆ ಮತ್ತು ನಿರ್ಣಯಕ್ಕೆ ಮಂಡಿಸಿದೆ.

**<u>ತೀರ್ಮಾನ</u> : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ವಿವಿಧ ಶೈಕ್ಷಣಿಕ ಚಟುವಟಿಕೆಗಳ ವ್ಯವಸ್ಥಿತ ಯೋಜನೆಗಾಗಿ ವಿ.ವಿ ನಿಲಯಕ್ಕೆ ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿಯನ್ನು ಸ್ಥಾಪಿಸಿರುವುದನ್ನು ಅನುಸಮರ್ಥನೆಗೊಳಿಸಲಾಯಿತು.**

- **ಸದರಿ ಮಂಡಳಿಯು CIQA ಸಹಯೋಗದಲ್ಲಿ ಕಾರ್ಯ ನಿರ್ವಹಿಸಲು ಸೂಚಿಸಲಾಯಿತು.**
- **ಸದರಿ ಮಂಡಳಿಯ ರೂಪುರೇಷೆ ಕಾರ್ಯಗಳನ್ನು ನಿರ್ಧರಿಸುವ ಸಂಬಂಧ ಆದ್ಯಾದೇಶವನ್ನು ಸಿದ್ಧಪಡಿಸಲು ತಜ್ಞರ ಸಮಿತಿಯನ್ನು ರಚಿಸಲು ತೀರ್ಮಾನಿಸಲಾಯಿತು.**
- **ಸದರಿ ಮಂಡಳಿಯ ಅಡಿಯಲ್ಲಿ Statistical Cell ನ್ನು ಸ್ಥಾಪಿಸಿ ವಿವಿಯ ಎಲ್ಲಾ ಕಾರ್ಯ ಚಟುವಟಿಕೆಗಳ ವರದಿಯನ್ನು ಮತ್ತು ಸೂಕ್ತ ದಾಖಲೆಗಳನ್ನು ಸಂಗ್ರಹಿಸಲು ಕ್ರಮವಹಿಸುವಂತೆ ತಿಳಿಸಲಾಯಿತು.**
- **ಸದರಿ ಮಂಡಳಿಯು ಪ್ರಸ್ತುತ ನ್ಯಾಕ್ ಘಟಕದಲ್ಲಿ ಕಾರ್ಯ ಆರಂಭಿಸಲು ಸೂಚಿಸಲಾಯಿತು. ಹಾಗೂ ಅದಕ್ಕೆ ಸಂಬಂಧಿಸಿದ ಸಿಬ್ಬಂದಿ ವರ್ಗ ಮತ್ತು ಸೌಲಭ್ಯಗಳನ್ನು ವ್ಯವಸ್ಥೆ ಮಾಡಲು ಸೂಚಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.34

**ವಿಷಯ :** ಕರಾಮುವಿಯ ವಿವಿಧ ಸ್ಕೂಲ್‌ಗಳಿಗೆ ನಿರ್ದೇಶಕರನ್ನು ನೇಮಿಸುವ ಕುರಿತು.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ವಿವಿಧ ಸ್ಕೂಲ್‌ಗಳ ವ್ಯವಸ್ಥೆಯಿದ್ದು, ಈ ಸ್ಕೂಲ್‌ಗಳ ನಿರ್ದೇಶಕರ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಪ್ರಸ್ತತ ಕರಾಮುವಿಯು ನ್ಯಾಕ್ ಮಾನ್ಯತೆ ಪಡೆಯಲು ಸಿದ್ಧತೆ ನಡೆಸುತ್ತಿದ್ದು, ನ್ಯಾಕ್‌ಗೆ ವಿವಿಧ ಸ್ಕೂಲ್‌ಗಳ ನಿರ್ದೇಶಕರ ವಿವರಗಳನ್ನು ಸಲ್ಲಿಸಬೇಕಾಗಿರುತ್ತದೆ. ಪ್ರಸ್ತುತ 17ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ, ಭಾಷಾ ನಿಕಾಯ, ಸಮಾಜ ವಿಜ್ಞಾನ, ಶಿಕ್ಷಣ ನಿಕಾಯ, ನಿರ್ವಹಣಾಶಾಸ್ತ್ರ ನಿಕಾಯ, ವಿಜ್ಞಾನ ನಿಕಾಯಗಳನ್ನು ಘನತೆವೆತ್ತ ಕುಲಾಧಿಪತಿಗಳಿಗೆ ಪರಿಚಯಿಸಬೇಕಾದ ಹಿನ್ನೆಲೆಯಲ್ಲಿ **ಕಚೇರಿ ಆದೇಶ ಸಂಖ್ಯೆ:ಕರಾಮುವಿ/ಡೀನ್(ಶೈ)–2/2021–22, ದಿನಾಂಕ:21–03–2022 ರ** ಆದೇಶದನ್ವಯ ಸ್ಕೂಲ್‌ಗಳಿಗೆ ನಿರ್ದೇಶಕರನ್ನು ತಾತ್ಕಾಲಿಕವಾಗಿ ನೇಮಿಸಲಾಗಿತ್ತು.

ಮುಂದುವರೆದು, ಯುಜಿಸಿಯಿಂದ ಹೊಸ ಶಿಕ್ಷಣಕಾರ್ಯಕ್ರಮಗಳನ್ನು ಪ್ರಾರಂಭಿಸಲು ಅರ್ಜಿ ಸಲ್ಲಿಸುವ ವೇಳೆಯಲ್ಲಿಯೂ ಸಹಾ ಸ್ಕೂಲ್ ನಿರ್ದೇಶಕರುಗಳ ವಿವರಗಳನ್ನು ಸಲ್ಲಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ವಿವಿಧ ಸ್ಕೂಲ್‌ಗಳಿಗೆ ನಿರ್ದೇಶಕರನ್ನು ನೇಮಿಸುವ ಬಗ್ಗೆ ನಿರ್ದೇಶನ ಕೋರಿದೆ.

**ತೀರ್ಮಾನ :ತಾತ್ಕಾಲಿಕವಾಗಿ ಹಾಗೂ ಮುಂದಿನ ಆದೇಶದವರೆಗೂ ವಿವಿಧ ಸ್ಕೂಲ್‌ಗಳಿಗೆ ನಿರ್ದೇಶಕರನ್ನು ಕಚೇರಿ ಆದೇಶ ಸಂಖ್ಯೆ:ಕರಾಮುವಿ/ಡೀನ್(ಶೈ)–2/2021–22, ದಿನಾಂಕ:21–03–2022 ರ ಆದೇಶದನ್ವಯ ನೇಮಿಸಿರುವಂತೆ ಮುಂದುವರೆಸುವುದು ಎಂದು ತೀರ್ಮಾನಿಸಲಾಯಿತು.**

**ಕುಲಸಚಿವರು** | **ಕುಲಪತಿಗಳು**

## ವಿಷಯ ಸಂಖ್ಯೆ: 59.35

**ವಿಷಯ :** ಕರಾಮುವಿಯ ವಿವಿಧ ಶಿಕ್ಷಣ ಕಾರ್ಯಕ್ರಮಗಳಿಗೆ ಆಟೋ ಮತ್ತು ಕ್ಯಾಬ್ ಡ್ರೈವರ್‌ಗಳಿಗೆ ಮತ್ತು ಅವರ ಮಕ್ಕಳಿಗೆ ಶುಲ್ಕ ರಿಯಾಯಿತಿ ನೀಡುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಉನ್ನತ ಶಿಕ್ಷಣ **'ಎಲ್ಲರಿಗೂ ಎಲ್ಲೆಡೆ'** ಎಂಬ ಧ್ಯೇಯದೊಂದಿಗೆ ಕಾರ್ಯ ನಿರ್ವಹಿಸುತ್ತಿದ್ದು, ಸಮಾಜದ ಎಲ್ಲಾ ಸ್ತರದ ಜನರಿಗೆ ಶಿಕ್ಷಣ ನೀಡುವ ದೃಷ್ಟಿಯಿಂದ ಈಗಾಗಲೇ ಬಿ.ಪಿ.ಎಲ್ ಕಾರ್ಡ್ ಹೊಂದಿರುವ ಮಹಿಳಾ ವಿದ್ಯಾರ್ಥಿಗಳಿಗೆ ಶೇ 15% ರಷ್ಟು ಭೋದನಾ ಶುಲ್ಕದಲ್ಲಿ ರಿಯಾಯಿತಿ ನೀಡಲಾಗುತ್ತಿದೆ. ಅನಿರ್ವಾಯ ಕಾರಣಗಳಿಂದ ಅನೇಕರು ಶಿಕ್ಷಣವನ್ನು ಮುಂದುವರೆಸಲಾಗದೆ ಆಟೋ ಮತ್ತು ಕ್ಯಾಬ್ ಡ್ರೈವರ್ ಆಗಿ ಕಾರ್ಯನಿರ್ವಹಿಸುತ್ತಿದ್ದು, ಶಿಕ್ಷಣ ಮುಂದುವರೆಸುವ ಇಚ್ಚೆಯಿಂದ ವಿವಿಯನ್ನು ಸಂಪರ್ಕಿಸುತ್ತಿದ್ದಾರೆ. ಇಂತಹ ಡ್ರೈವರ್‌ಗಳು, ಅವರ ಪತಿ/ಪತ್ನಿ ಮತ್ತು ಎರಡು ಮಕ್ಕಳಿಗೆ ಭೋದನಾ ಶುಲ್ಕದಲ್ಲಿ ರಿಯಾಯಿತಿ ನೀಡುವ ಪ್ರಸ್ತಾಪವನ್ನು ಮಂಡಿಸಿದೆ.

**<u>ತೀರ್ಮಾನ</u> : ಆಟೋ ಮತ್ತು ಕ್ಯಾಬ್ ಡ್ರೈವರ್‌ಗಳಿಗೆ, ಅವರ ಪತಿ/ಪತ್ನಿ ಮತ್ತು ಎರಡು ಮಕ್ಕಳಿಗೆ ಭೋದನಾ ಶುಲ್ಕದಲ್ಲಿ ಶೇ30% ರಷ್ಟನ್ನು ತೀರ್ಮಾನಿಸಲಾಯಿತು. ಈ ರಿಯಾಯಿತಿ ನೀಡಿದ್ದಲ್ಲಿ, ಸಿದ್ಧಪಾಠ ಸಂಬಂಧಿತ ರಿಯಾಯಿತಿ ಹೊರತು ಬೇರೆ ಯಾವ ಶುಲ್ಕ ರಿಯಾಯಿತಿಯನ್ನು ನೀಡಲಾಗುವುದಿಲ್ಲ ಎಂದು ತೀರ್ಮಾನಿಸಲಾಯಿತು. ಇಂತಹ ಎಲ್ಲಾ ಶುಲ್ಕ ರಿಯಾಯಿತಿಯನ್ನು ಸ್ನಾತಕ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳಿಗೆ ಮಾತ್ರ ಸೀಮಿತಗೊಳಿಸಲು ತೀರ್ಮಾನಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.36

**ವಿಷಯ :** Diploma in Early Childhood Care and Education ಆರಂಭಿಸುವ ಬಗ್ಗೆ.

****

CBR Network Banglore ಇವರ ಸಹಯೋಗದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ Diploma in Early Childhood Care and Education ಆರಂಭಿಸಲು ಉದ್ದೇಶಿಸಲಾಗಿದ್ದು, CBR Network Banglore ಇವರು NEP 2020 Equitable Inclusive Education ಇದರ ಅನ್ವಯ ಈ ಕಾರ್ಯಕ್ರಮವನ್ನು ಆರಂಭಿಸಲು ಉದ್ದೇಶಿಸಿರುತ್ತಾರೆ. ಸದರಿ ವಿಷಯವನ್ನು 20ನೇ ವಿಶೇಷ ಶೈಕ್ಷಣಿಕ ಮಂಡಳಿಯಲ್ಲಿ ಮಂಡಿಸಿದ್ದು, ವಿಷಯ ಸಂಖ್ಯೆ:20.20 ರನ್ವಯ ಅನುಮೊದನೆ ಪಡೆಯಲಾಗಿದೆ. ಸದರಿ ತೀರ್ಮಾನದಂತೆ ಡಾ. ಕೃಷ್ಣಪ್ಪ ಎನ್ ಇವರನ್ನು ನೋಡೆಲ್ ಅಧಿಕಾರಿಯಾಗಿ ನೇಮಿಸಲಾಗಿದೆ. ಸದರಿ ಸಂಸ್ಥೆಗೆ ELSC ಎಂದು ಪರಿಗಣಿಸಿ ಆದೇಶ ನೀಡಲು ತೀರ್ಮಾನಿಸಲಾಯಿತು.

**ತೀರ್ಮಾನ : ಸದರಿ ಸಂಸ್ಥೆಯೊಂದಿಗೆ ನಡೆಸಿದ ELSC Monitoring Committee ಯ ವರದಿಯನ್ನು ಒಪ್ಪಲಾಯಿತು. ಅದರ ಅನ್ವಯ ಸದರಿ ಕಾರ್ಯಕ್ರಮದ ಶುಲ್ಕವನ್ನು ರೂ. 15,000/– ಎಂದು ತೀರ್ಮಾನಿಸಲಾಯಿತು. ಸದರಿ ಕಾರ್ಯಕ್ರಮವನ್ನು 2022–23 ಜುಲೈ ಆವೃತ್ತಿಯಿಂದ ಆರಂಭಿಸಲು ತೀರ್ಮಾನಿಸಲಾಯಿತು. ಸದರಿ ಕಾರ್ಯಕ್ರಮಕ್ಕೆ ಡಾ॥ ಕೃಷ್ಣಪ್ಪ ಎನ್. ಶಿಕ್ಷಣಶಾಸ್ತ್ರ ವಿಭಾಗ ಇವರನ್ನು ಕಾರ್ಯಕ್ರಮ ಸಂಯೋಜನಾಧಿಕಾರಿಯನ್ನಾಗಿ ನೇಮಿಸಲು ತೀರ್ಮಾನಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.37

**ವಿಷಯ:** 2022–23ನೇ (ಜುಲೈ ಆವೃತ್ತಿ) ಹಾಗೂ ಮುಂದಿನ ಶೈಕ್ಷಣಿಕ ಸಾಲಿನಲ್ಲಿ ಎಂ.ಬಿ.ಎಗೆ ಪ್ರವೇಶಾತಿ ಪಡೆಯಲಿರುವ ವಿದ್ಯಾರ್ಥಿಗಳಿಗೆ ಸೆಮಿನಾರ್ ರದ್ದುಗೊಳಿಸುವ ಬಗೆಗೆ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2022–23ನೇ (ಜುಲೈ ಆವೃತ್ತಿ) ಹಾಗೂ ಮುಂದಿನ ಶೈಕ್ಷಣಿಕ ಸಾಲಿನಲ್ಲಿ ಎಂ.ಬಿ.ಎಗೆ ಪ್ರವೇಶಾತಿ ಪಡೆಯಲಿರುವ ವಿದ್ಯಾರ್ಥಿಗಳಿಗೆ ಆಂತರಿಕ ಅಂಕಗಳ ಭಾಗವಾಗಿದ್ದ, ಸೆಮಿನಾರ್ ಅನ್ನು ರದ್ದುಗೊಳಿಸಲು ಪ್ರಸ್ತಾಪಿಸಿದೆ. ಸೆಮಿನಾರ್‌ಗೆ ವಿದ್ಯಾರ್ಥಿಗಳ ಭಾಗವಹಿಸುವಿಕೆ ಕಡಿಮೆಯಿದ್ದು, ಅವರ ಆಂತರಿಕ ಅಂಕಗಳು ಕಡಿಮೆಯಾಗಿ ಒಟ್ಟಾರೆ ಫಲಿತಾಂಶವು ಕಡಿಮೆಯಾಗುತ್ತಿದೆ. ಈ ಬಗ್ಗೆ ಹಿಂದಿನ ಅನೇಕ ವಿದ್ಯಾರ್ಥಿಗಳು ಸೆಮಿನಾರ್‌ಗೆ ಭಾಗವಹಿಸುವುದು ಕಷ್ಟವಾಗುತ್ತಿದೆ ಎಂದು ಕೋರಿರುವ ಸಂಬಂಧ ದಿ: 03–02–2022 ರಂದು ಹಾಗೂ ದಿನಾಂಕ: 06–04–2022ರಂದು ವಿಭಾಗದಲ್ಲಿ ನಡೆದ Department Council Meeting ನಲ್ಲಿ ಹಾಗೂ ದಿನಾಂಕ:29–03–2022 ರಂದು ನಡೆದ ಬಿಓಎಸ್ ಪಿಜಿ ಸಭೆಯ ಶಿಫಾರಸ್ಸಿನಂತೆ ವಿಶ್ವವಿದ್ಯಾನಿಲಯ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸೆಮಿನಾರ್ ರದ್ದುಗೊಳಿಸಿ ಆಂತರಿಕ ನಿಬಂಧನೆಯನ್ನು ಒಟ್ಟು 20 ಅಂಕಗಳಿಗೆ ಮಾಡುವುದು ಎಂದು ತೀರ್ಮಾನಿಸಲಾಗಿದೆ. ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕೆ ಮಂಡಿಸಿದೆ.

**ತೀರ್ಮಾನ : ನಿರ್ವಾಹಣಾಶಾಸ್ತ್ರ ವಿಭಾಗದ ಎಂಬಿಎ ಕಾರ್ಯಕ್ರಮದಲ್ಲಿ ಸೆಮಿನಾರ್ ರದ್ದುಗೊಳಿಸಿ ಆಂತರಿಕ ಅಂಕಗಳನ್ನು ಆಂತರಿಕ ನಿಬಂಧನೆಗೆ ಸೀಮಿತಗೊಳಿಸಲು ಒಪ್ಪಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.38

**ವಿಷಯ:** ನಿರ್ವಾಹಣಾಶಾಸ್ತ್ರ ವಿಭಾಗದ ಎಂಬಿಎ ಕಾರ್ಯಕ್ರಮದ ಪ್ರವೇಶಾತಿ ನಿಯಮಗಳ ಬದಲಾವಣೆ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಯುಜಿಸಿ ODL-2020 ನಿಯಮಾವಳಿಗಳಲ್ಲಿ ಬದಲಾವಣೆಗಳನ್ನು ಯುಜಿಸಿಯವರು ಪ್ರಸ್ತಾಪಿಸಿದ್ದು, ಕರಡು ಬದಲಾವಣೆಗಳನ್ನು ಅವರ ಜಾಲತಾಣದಲ್ಲಿ ಪ್ರಕಟಿಸಿರುತ್ತಾರೆ. ಅದರ 11 ನೇ ಅಂಶದನ್ವಯ

In the principal regulations, in sub-clause (v) of clause (A) in regulation 4 the following shall be substituted, namely:— Provided further that for taking admission in any programme in Open and Distance Learning and/or Online mode, the minimum requirement shall be obtaining the entry level qualification only and higher percentage as cut off for admission shall not be insisted."

ಅದರಂತೆ, ಯಾವುದೇ ಕಾರ್ಯಕ್ರಮಕ್ಕೆ ಪ್ರವೇಶಾತಿ ಪಡೆಯಲು ಮೂಲ ಅರ್ಹತೆ ಹೊರತು ಬೇರೆ ಹೆಚ್ಚಿನ ಅಂಕಗಳ ಯಾವ ನಿರ್ಬಂಧಗಳನ್ನು ವಿಧಿಸಬಾರದು ಎಂದು ತಿಳಿಸಿರುತ್ತಾರೆ. ಪ್ರಸ್ತುತ ಎಂಬಿಎ ಕಾರ್ಯಕ್ರಮಕ್ಕೆ ಪದವಿಯಲ್ಲಿ ಕನಿಷ್ಟ 50 ಅಂಕಗಳಿರಬೇಕು ಇಲ್ಲವಾದಲ್ಲಿ ಮೂರು ವರ್ಷಗಳ ಅನುಭವ ಹೊಂದಿರಬೇಕು ಎಂಬ ನಿರ್ಬಂಧ ವಿಧಿಸಿದೆ. ಈ ಸಂಬಂಧ ಎಂಬಿಎ ಕಾರ್ಯಕ್ರಮದ ಪ್ರವೇಶಾತಿ ನಿಯಮಗಳ ಬದಲಾವಣೆ ಕುರಿತು ನಿರ್ದೇಶನ ಕೋರಿದೆ.

**ತೀರ್ಮಾನ : ನಿರ್ವಹಣಾಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಎಂಬಿಎ ಶಿಕ್ಷಣಕ್ರಮಕ್ಕೆ ಪ್ರವೇಶಾತಿ ಪಡೆಯಲು ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಯಾವುದಾದರೂ ವಿಷಯದಲ್ಲಿ ಪದವಿ ಪಡೆದಿರಬೇಕೆಂದು ತೀರ್ಮಾನಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

**ವಿಷಯ ಸಂಖ್ಯೆ: 59.39**

**ವಿಷಯ**: 2022–23ನೇ ಶೈಕ್ಷಣಿಕ ಸಾಲಿನಿಂದ ಎಂಬಿಎ ಕಾರ್ಯಕ್ರಮದ ಅಭ್ಯರ್ಥಿಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ನೀಡುವ ಬಗ್ಗೆ.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಯುಜಿಸಿ ODL-2020 ನಿಯಮಾವಳಿಗಳಲ್ಲಿ ಬದಲಾವಣೆಗಳನ್ನು ಯುಜಿಸಿಯವರು ಪ್ರಸ್ತಾಪಿಸಿದ್ದು, ಕರಡು ಬದಲಾವಣೆಗಳನ್ನು ಅವರ ಜಾಲತಾಣದಲ್ಲಿ ಪ್ರಕಟಿಸಿರುತ್ತಾರೆ. ಅದರ 11 ನೇ ಅಂಶದನ್ವಯ

In the principal regulations, in sub-clause (v) of clause (A) in regulation 4 the following shall be substituted, namely:— Provided further that for taking admission in any programme in Open and Distance Learning and/or Online mode, the minimum requirement shall be obtaining the entry level qualification only and higher percentage as cut off for admission shall not be insisted."

ಅದರಂತೆ, ಯಾವುದೇ ಕಾರ್ಯಕ್ರಮಕ್ಕೆ ಪ್ರವೇಶಾತಿ ಪಡೆಯಲು ಮೂಲ ಅರ್ಹತೆ ಹೊರತು ಬೇರೆ ಯಾವ ನಿರ್ಬಂಧಗಳನ್ನು ವಿಧಿಸಬಾರದು ಎಂದು ತಿಳಿಸಿರುತ್ತಾರೆ. ಅಲ್ಲದೇ ಎಂಬಿಎ ಕಾರ್ಯಕ್ರಮಕ್ಕೆ AICTEಯಿಂದ ಅನುಮೋದನೆ ಪಡೆದಿದ್ದು, ಪ್ರತಿ ವರ್ಷ 10 ಸಾವಿರ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬಹುದು ಎಂದು ತಿಳಿಸಿರುತ್ತಾರೆ. ಈ ಹಿಂದೆ ದೇಶದಾದ್ಯಂತ ಕೋವಿಡ್–19 ಸಮಸ್ಯೆ ಇರುವ ಕಾರಣ 2020–21ನೇ ಶೈಕ್ಷಣಿಕ ಸಾಲಿನಿಂದ ಅನೇಕ ವಿಶ್ವವಿದ್ಯಾನಿಲಯಗಳು ಹಾಗೂ ರಾಜ್ಯಗಳು ಎಂಬಿಎ ಕಾರ್ಯಕ್ರಮಕ್ಕೆ ಸಾಮಾನ್ಯ ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ನೀಡಿವೆ. ಈ ರದ್ಧತಿಯನ್ನು AICTEಯು ತನ್ನ ಅಧೀನ ಕಾಲೇಜುಗಳು ಹಾಗೂ ವಿಶ್ವವಿದ್ಯಾನಿಲಯಗಳಿಗೆ ನೀಡಿರುವ ಪ್ರಸ್ತಾವನೆ ಆಧರಿಸಿ ಮಾಡಲಾಗಿದೆ. ಅಂತೆಯೇ ಕರಾಮುವಿಯಲ್ಲೂ ಸಹ ಕಳೆದ ಎರಡು ವರ್ಷಗಳಲ್ಲಿ ಪ್ರವೇಶ ಪರೀಕ್ಷೆ ನಡೆಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿನಿಂದ ಎಂಬಿಎ ಕಾರ್ಯಕ್ರಮದ ಅಭ್ಯರ್ಥಿಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ನೀಡುವ ಬಗ್ಗೆ ನಿರ್ದೇಶನ ಕೋರಿದೆ.

**ತೀರ್ಮಾನ : 2022–23ನೇ ಶೈಕ್ಷಣಿಕ ಸಾಲಿನಿಂದ ಎಂಬಿಎ ಕಾರ್ಯಕ್ರಮಕ್ಕೆ ಅಭ್ಯರ್ಥಿಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ನೀಡಲು ಅನುಮೋದನೆ ನೀಡಲಾಯಿತು.**

**ಕುಲಸಚಿವರು** **ಕುಲಪತಿಗಳು**

**ವಿಷಯ ಸಂಖ್ಯೆ: 59.40**

**ವಿಷಯ:** ನಿರ್ವಹಣಾಶಾಸ್ತ್ರ ವಿಭಾಗದ ಸ್ನಾತಕ ಅಧ್ಯಯನ ಮಂಡಳಿ ನಡಾವಳಿಯನ್ನು ಅನುಮೋದಿಸುವ ಬಗ್ಗೆ.

* * * *

ನಿರ್ವಹಣಾಶಾಸ್ತ್ರ ವಿಭಾಗದಲ್ಲಿ ಸ್ನಾತಕ ಅಧ್ಯಯನ ಮಂಡಳಿಯು ಈ ಕೆಳಕಂಡಂತೆ ಸಭೆ ನಡೆಸಿ ನಡಾವಳಿಗಳನ್ನು ಸಲ್ಲಿಸಿದೆ.

| ಕ್ರ.ಸಂ | ದಿನಾಂಕ | ತೀರ್ಮಾನ |
|---|---|---|
| 01 | 21–03–2021 | • ಬಿಬಿಎ ಪಠ್ಯಕ್ರಮ ಹಾಗೂ ಪ್ರಶ್ನೆ ಪತ್ರಿಕೆ ಮಾದರಿ ಅನುಮೋದನೆ |
| 02 | 25–08–2021 | • ಹೊಸ ಸರ್ಟಿಫಿಕೇಟ್ ಕಾರ್ಯಕ್ರಮಗಳ ಆರಂಭ<br>• ಅಪ್ರೆಂಟೀಸ್‌ಶಿಪ್ ಎಂಬೆಡೆಡ್ ಬಿಬಿಎ ಕಾರ್ಯಕ್ರಮದ ಆರಂಭ<br>• ಬಿಬಿಎ ಮಾರ್ಕೆಟಿಂಗ್ ಕಾರ್ಯಕ್ರಮದ ಪಠ್ಯಕ್ರಮದ ಅನುಮೋದನೆ |
| 04 | 11–04–2022 | • ಪರೀಕ್ಷರ ಪಟ್ಟಿಯ ಅನುಮೋದನೆ<br>• ಸಿದ್ಧಪಾಠ ಲೇಖಕರ ಪಟ್ಟಿಯ ಅನುಮೋದನೆ<br>• ಅಪ್ರೆಂಟೀಸ್‌ಶಿಪ್ ಎಂಬೆಡೆಡ್ ಬಿಬಿಎ ಕಾರ್ಯಕ್ರಮದ ಪಠ್ಯಕ್ರಮದ ಅನುಮೋದನೆ ಹಾಗೂ 2021–22 ನೇ ಸಾಲಿನಲ್ಲಿ ಬಿಬಿಎ ಕಾರ್ಯಕ್ರಮಕ್ಕೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೂ ಸಹ ಈ ಕಾರ್ಯಕ್ರಮಕ್ಕೆ ಪ್ರವೇಶ ಪಡೆಯಲು ಅನುಮೋದನೆ<br>• ಮೊದಲ ಸೆಮಿಸ್ಟರ್‌ನ ಸಿದ್ಧಪಾಠಗಳ ಅನುಮೋದನೆ |

ಈ ಎಲ್ಲಾ ಅಂಶಗಳನ್ನು ಅವಗಾಹನೆಗೆ ತರುತ್ತಾ, ಶೈಕ್ಷಣಿಕ ಮಂಡಳಿಯ ಅನುಮೋದನೆಗೆ ಮಂಡಿಸಿದೆ

ತೀರ್ಮಾನ :**ನಿರ್ವಹಣಾಶಾಸ್ತ್ರ ವಿಭಾಗದ ಸ್ನಾತಕ ಅಧ್ಯಯನ ಮಂಡಳಿಯ ನಡಾವಳಿಗಳನ್ನು ಅನುಮೋದಿಸಲಾಯಿತು. 2021–22 ನೇ ಸಾಲಿನಲ್ಲಿ ಬಿಬಿಎ ಕಾರ್ಯಕ್ರಮಕ್ಕೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೂ ಸಹ ಅಪ್ರೆಂಟೀಸ್‌ಶಿಪ್ ಎಂಬೆಡೆಡ್ ಬಿಬಿಎ ಕಾರ್ಯಕ್ರಮಕ್ಕೆ ಪ್ರವೇಶ ಪಡೆಯಲು ಅನುಮೋದನೆ ನೀಡಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.41

**ವಿಷಯ**: Statute Governing Establishment of Schools ಅನ್ನು ಅನುಮೋದಿಸುವ ಬಗ್ಗೆ.

* * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ Statute Governing Establishment of Schools ಅನ್ನು ಅನುಮೋದಿಸುವ ಸಂಬಂಧ ದಿನಾಂಕ:01–10–2021 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ (ಶಿಕ್ಷಣ ಇಲಾಖೆ), ಬೆಂಗಳೂರು ಇವರಿಗೆ ವಿವಿಯಿಂದ ಅಂಚೆ ಮುಖಾಂತರ ಕುಲಾಧಿಪತಿಗಳ ಅಂಕಿತಕ್ಕಾಗಿ Statuite Governing Establishment of Schools ಅನ್ನು ಕಳುಹಿಸಿಕೊಡಲಾಗಿತ್ತು. ಸದರಿ Statute ನಲ್ಲಿ ಕೆಲವು ವ್ಯಾಕರಣದೋಷಗಳನ್ನು ಸರಿಪಡಿಸಿ ಮರು ಸಲ್ಲಿಸಲು ಉನ್ನತ ಶಿಕ್ಷಣ ಪರಿಷತ್‌ನವರು ತಿಳಿಸಿರುತ್ತಾರೆ. ಅದರಂತೆ Statute Governing Establishment of Schools ಅನ್ನು ಪರಿಷ್ಕರಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸದರಿ ವಿಷಯ ಹಾಗೂ ಪರಿನಿಯಮದ ಬಗ್ಗೆ ಶೈಕ್ಷಣಿಕ ಮಂಡಳಿಯ ಅನುಸಮರ್ಥನೆಗೆ ಮಂಡಿಸಿದೆ.

**ತೀರ್ಮಾನ : Statute Governing Establishment of Schools ಅನ್ನು ಅನುಸಮರ್ಥನೆಗೊಳಿಸಲಾಯಿತು ಮತ್ತು ಸರ್ಕಾರಕ್ಕೆ ಕಳುಹಿಸಿರುವುದನ್ನು ಅನುಮೋದಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.42

**ವಿಷಯ**: ಕರಾಮುವಿಯಲ್ಲಿ ಸಂಶೋಧನಾ ಪ್ರಕಟಣಾ ಸಮಿತಿ ಸ್ಥಾಪಿಸಿರುವ ಕುರಿತು ಹಾಗೂ ಸಂಶೋಧನಾ ಪ್ರಕಟಣಾ ಮಾರ್ಗಸೂಚಿಗಳನ್ನು ಅನುಮೋದಿಸುವ ಕುರಿತು.

* * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನಾ ಮತ್ತು ಅಭಿವೃದ್ಧಿ ಘಟಕದ ಮೂಲಕ ಅಧ್ಯಾಪಕರು, ವಿದ್ಯಾರ್ಥಿಗಳು, ಸಂಶೋಧನಾರ್ಥಿಗಳು ಲೇಖನಗಳನ್ನು ಪ್ರಕಟಿಸಲು ಅನುವಾಗುವಂತೆ ಒಂದು ಸಂಶೋಧನಾ ಪ್ರಕಟಣಾ ಸಮಿತಿಯನ್ನು ಸ್ಥಾಪಿಸಿದೆ. (ಪ್ರತಿ ಲಗತ್ತಿಸಿದೆ). ಸದರಿ ಸಮಿತಿಯು ದಿನಾಂಕ:04–02–2022 ರಂದು ಸಭೆ ಸೇರಿ ಸಂಶೋಧನಾ ಪ್ರಕಟಣಾ ಮಾರ್ಗಸೂಚಿಗಳನ್ನು ಸಿದ್ಧಪಡಿಸಿದೆ. ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಅನುಮೋದನೆ ಕೋರಿದೆ.

<u>ತೀರ್ಮಾನ</u> : **ಸಂಶೋಧನಾ ಪ್ರಕಟಣಾ ಸಮಿತಿಯನ್ನು ಸ್ಥಾಪಿಸಿರುವುದನ್ನು ಅನುಸಮರ್ಥನೆಗೊಳಿಸಲಾಯಿತು. ಸಂಶೋಧನಾ ಪ್ರಕಟಣಾ ಮಾರ್ಗಸೂಚಿಗಳನ್ನು ಅನುಮೋದಿಸಲಾಯಿತು. ಸಂಶೋಧನಾ ಸಮಿತಿಯು ಶಿಫಾರಸ್ಸು ಮಾಡುವ ಸಂಶೋಧನಾ ಲೇಖನಗಳನ್ನು ಪ್ರತಿಷ್ಠಿತ ನಿಯತಕಾಲಿಕೆಗಳಲ್ಲಿ ಪ್ರಕಟಿಸಲು ತೀರ್ಮಾನಿಸಲಾಯಿತು. Plagiarism ಹೊರತು ಪಡಿಸಿ ಸಂಶೋಧನಾ ಲೇಖನಗಳ ಬಗೆಗಿನ ಇನ್ನಿತರ ದೂರುಗಳನ್ನು ಪರಿಹರಿಸುವ ಜವಬ್ದಾರಿಯನ್ನು ಸದರಿ ಸಮಿತಿಗೆ ನೀಡಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 59.43

**ವಿಷಯ:** ವಿವಿಧ ಕಲಿಕಾರ್ಥಿ ಸಹಾಯ ಕೇಂದ್ರಗಳ ಮೂಲಕ ವಿಜ್ಞಾನ ವಿಷಯಗಳ ಪ್ರಾಯೋಗಿಕ ತರಗತಿಗಳನ್ನು ನಡೆಸುವುದರ ಕುರಿತು.

* * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ವಿಜ್ಞಾನ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದ್ದು, ಈ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಗೆ ಸಂಪರ್ಕ ಕಾರ್ಯಕ್ರಮಗಳನ್ನು (ಪ್ರಾಯೋಗಿಕ ತರಗತಿಗಳ್ನೊಳಗೊಂಡಂತೆ) ನಡೆಸಬೇಕಾಗಿದೆ. ಪ್ರಸ್ತುತ, ಕರಾಮುವಿಯು ರಾಜ್ಯದಲ್ಲಿ ದೂರ ಶಿಕ್ಷಣ ನೀಡುವ ಏಕೈಕ ವಿಶ್ವವಿದ್ಯಾನಿಲಯವಾಗಿದ್ದು, ರಾಜ್ಯದ ವಿವಿಧಡೆ ಸ್ನಾತಕ ಹಾಗೂ ಸ್ನಾತಕೋತ್ತರ ವಿಜ್ಞಾನ ಕಾರ್ಯಕ್ರಮಗಳಿಗೆ ಸಂಪರ್ಕ ಕಾರ್ಯಕ್ರಮ ನಡೆಸಬೇಕಿದ್ದು, ಕಲಿಕಾರ್ಥಿ ಸಹಾಯ ಕೇಂದ್ರಗಳ ಮೂಲಕ ನಡೆಸಲು ಉದ್ದೇಶಿಸಿದೆ. ಸದರಿ ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಇದರ ವೆಚ್ಚ ಭರಿಸುವ ಹಾಗೂ ಸಂಭಾವನೆ ನೀಡುವ ವಿಷಯದ ಕುರಿತು ಶೈಕ್ಷಣಿಕ ಮಂಡಳಿಯ ಚರ್ಚೆ ಮತ್ತು ಅನುಮೋದನೆ ಕೋರಿದೆ.

<u>ತೀರ್ಮಾನ</u> : **ಬಿ.ಎಸ್ಸಿ ಕಾರ್ಯಕ್ರಮಗಳಿಗೆ ಪ್ರಾದೇಶಿಕ ಕೇಂದ್ರವಾರು ಹತ್ತಕ್ಕಿಂತಲು ಹೆಚ್ಚಿನ ವಿದ್ಯಾರ್ಥಿಗಳು ವಿಷಯವಾರು ಪ್ರವೇಶಾತಿ ಪಡೆದಿದ್ದಲ್ಲಿ, ಅಂತಹ ವಿದ್ಯಾರ್ಥಿಗಳಿಗೆ ಪ್ರಾದೇಶಿಕ ಕೇಂದ್ರವಾರು ಪ್ರಾಯೋಗಿಕ ತರಗತಿಗಳನ್ನು ನಡೆಸಲು ತೀರ್ಮಾನಿಸಲಾಯಿತು. ಸೈದ್ಧಾಂತಿಕ ತರಗತಿಗಳನ್ನು ಆನ್‌ಲೈನ್ ಮೂಲಕ ವಿಭಾಗದವತಿಯಿಂದ ನಡೆಸಲು ಸೂಚಿಸಲು ತೀರ್ಮಾನವಾಯಿತು. ಬಿ.ಎಸ್ಸಿ ಹೋಂ ಸೈನ್ಸ್, ಬಿಸಿಎ, ಬಿ.ಎಸ್ಸಿ ಐಟಿ ಕಾರ್ಯಕ್ರಮದ ವಿದ್ಯಾರ್ಥಿಗಳಿಗೆ ವಿಭಾಗದ ವತಿಯಿಂದ ಸಂಪರ್ಕ ಕಾರ್ಯಕ್ರಮ ನಡೆಸಲು ಸೂಚಿಸಲು ತೀರ್ಮಾನಿಸಲಾಯಿತು.**

**ಮುಂದುವರೆದು,BBA,BCA,B.Sc.IT,B.Sc-Home science,BA,B.Com,B.Sc & ಬಿ.ಲಿಬ್.ಸೈನ್ಸ್ ಕೋರ್ಸ್‌ಗಳಿಗೆ ಮಾತ್ರ ಈ ಕೆಳಕಂಡಂತೆ ಸಂಭಾವನೆ ನಿಗದಿಪಡಿಸಲಾಯಿತು.**

| ಕ್ರ.ಸಂ | ವಿಷಯ/ಕಾರ್ಯಕ್ರಮ | ಸಂಭಾವನೆ ರೂ. |
|---|---|---|
| 1 | ಸೈದ್ಧಾಂತಿಕ ತರಗತಿಗಳು(ಆನ್‌ಲೈನ್ ತರಗತಿಗಳು ಮಾತ್ರ) | ರೂ. 500/- (ಪ್ರತಿ ಗಂಟೆಗೆ) ಬಾಹ್ಯ ಅಧ್ಯಾಪಕರಿಗೆ |
| 2 | ಪ್ರಾಯೋಗಿಕ ತರಗತಿಗಳು | ರೂ. 700/- (ಕಲಿಕಾರ್ಥಿ ಸಹಾಯ ಕೇಂದ್ರಕ್ಕೆ-ಒಬ್ಬ ವಿದ್ಯಾರ್ಥಿಗೆ ಪ್ರತಿ ಸೆಮಿಸ್ಟರ್‌ನ ಪ್ರತಿ ಪ್ರಾಯೋಗಿಕ ವಿಷಯದ ಪರೀಕ್ಷೆ ಹಾಗೂ ಆಂತರಿಕ ಅಂಕಗಳನ್ನು ಅಪ್ಲೋಡ್ ಮಾಡುವುದಕ್ಕೆ) |

**ಅಂತೆಯೇ ಸ್ನಾತಕೋತ್ತರ ಕಾರ್ಯಕ್ರಮಗಳಿಗೆ ಕೆಳಕಂಡಂತೆ ಸಂಭಾವನೆ ನಿಗದಿಪಡಿಸಲಾಯಿತು.**

| ಕ್ರ.ಸಂ | ವಿಷಯ/ಕಾರ್ಯಕ್ರಮ | ಸಂಭಾವನೆ |
|---|---|---|
| 1 | ಪ್ರಾಯೋಗಿಕ ತರಗತಿಗಳು | ರೂ. 1,000/- (ಕಲಿಕಾರ್ಥಿ ಸಹಾಯ ಕೇಂದ್ರಕ್ಕೆ-ಒಬ್ಬ ವಿದ್ಯಾರ್ಥಿಗೆ ಪ್ರತಿ ಸೆಮಿಸ್ಟರ್‌ನ ಪ್ರತಿ ಪ್ರಾಯೋಗಿಕ ಪರೀಕ್ಷೆ ಹಾಗೂ ಆಂತರಿಕ ಅಂಕಗಳನ್ನು ಅಪ್ಲೋಡ್ ಮಾಡುವುದಕ್ಕೆ) |

**ಕುಲಸಚಿವರು** **ಕುಲಪತಿಗಳು**

**ವಿಷಯ ಸಂಖ್ಯೆ: 59.44**

**ವಿಷಯ :** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಅಹಲ್ಯಾಬಾಯಿ ಹೋಳ್ಕರ್ ರವರ ಹೆಸರಿನಲ್ಲಿ ಅಧ್ಯಯನ ಪೀಠವನ್ನು ಸ್ಥಾಪಿಸುವ ಬಗೆಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಅಹಲ್ಯಾಬಾಯಿ ಹೋಳ್ಕರ್ ರವರ ಹೆಸರಿನಲ್ಲಿ ಅಧ್ಯಯನ ಪೀಠವನ್ನು ಸ್ಥಾಪಿಸುವಂತೆ ಸಾರ್ವಜನಿಕರು ಹಾಗೂ ಗಣ್ಯವ್ಯಕ್ತಿಗಳು ಕೋರಿ ಕೊಂಡಿರುತ್ತಾರೆ. ಭಾರತದಲ್ಲಿ ಮಹಿಳೆಯರಿಗೆ ಶಿಕ್ಷಣ ದೊರೆಯುವಲ್ಲಿ ಶ್ರೀಮತಿ ಅಹಲ್ಯಾಬಾಯಿ ಹೋಳ್ಕರ್ ರವರು ಮಹತ್ತರ ಪಾತ್ರವಹಿಸಿದ್ದು, ಇವರ ಕೊಡುಗೆ ಬಗ್ಗೆ ಹೆಚ್ಚಿನ ಅಧ್ಯಯನ ಮತ್ತು ಸಂಶೋಧನೆ ನಡೆಸಿ ಬೆಳಕು ಚೆಲ್ಲಬೇಕಿದೆ. ಈ ಹಿನ್ನೆಲೆಯಲ್ಲಿ ಶ್ರೀಮತಿ ಅಹಲ್ಯಾಬಾಯಿ ಹೋಳ್ಕರ್ ರವರ ಹೆಸರಿನಲ್ಲಿ ಅಧ್ಯಯನ ಮತ್ತು ಸಂಶೋಧನಾ ಪೀಠವನ್ನು ಸ್ಥಾಪಿಸುವ ಸಂಬಂಧ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

ತೀರ್ಮಾನ : **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಶ್ರೀಮತಿ ಅಹಲ್ಯಾಬಾಯಿ ಹೋಳ್ಕರ್ ರವರ ಹೆಸರಿನಲ್ಲಿ ಅಧ್ಯಯನ ಪೀಠವನ್ನು ಸ್ಥಾಪಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಸದರಿ ಪೀಠಕ್ಕೆ ಬಾಹ್ಯ ಗಣ್ಯ ವ್ಯಕ್ತಿಗಳಿಂದ ದೇಣಿಗೆ ಪಡೆಯುವ ಸಂಬಂಧ ಮುಂದಿನ ಕ್ರಮವಹಿಸಲು ತೀರ್ಮಾನಿಸಲಾಯಿತು. ಸದರಿ ಪೀಠಕ್ಕೆ ಸಂಬಂಧಿಸಿದಂತೆ ಪರಿನಿಯಮ ರಚಿಸಲು ಪ್ರಾಧಿಕಾರ ವಿಭಾಗಕ್ಕೆ ಸೂಚಿಸಲು ತೀರ್ಮಾನಿಸಿತು.**

**ಕುಲಸಚಿವರು** **ಕುಲಪತಿಗಳು**

ಅಂತಿಮವಾಗಿ 59ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಗೆ ಆಗಮಿಸಿ, ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲಾ ಸದಸ್ಯರುಗಳಿಗೂ ಮಾನ್ಯ ಕುಲಪತಿಗಳು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

**ಕುಲಸಚಿವರು ಹಾಗು**
**ಸದಸ್ಯ ಕಾರ್ಯದರ್ಶಿಗಳು**

**ಕುಲಪತಿಗಳು ಹಾಗು ಅಧ್ಯಕ್ಷರು**